ತಂದೆ ತೀರಿದಾಗ (at ಮಾರಿಕಣಿವೆ, ಮಾರಿಕಾಲು ಹತ್ತಿರ) 4ನೇ ವರ್ಷ. ದೇವನೂರಲ್ಲಿದ್ದೆ. ಅಣ್ಣಾ ಅಣ್ಣಾ ಎಂಬುದಾಗಿ ಅಳುತ್ತಿದ್ದೆ. ನಮ್ಮ ದೊಡ್ಡಪ್ಪ ಶ್ಯಾಮರಾಯರು ನನ್ನ ಎತ್ತಿಕೊಂಡು ರೈಲು ಬಳಿ ಕರೆದುಕೊಂಡು ಅಣ್ಣನನ್ನು ತೋರಿಸುತ್ತೇನೆಂದು ಹೇಳುತ್ತಿದ್ದರು.

ಮಾರಿಕಣಿವೆಯಿಂದ  ನಮ್ಮ ತಂದೆಗಳ ಮಿತ್ರರೊಬ್ಬರು ಒಂದು ದೊಡ್ಡ ಪೆಟ್ಟಿಗೆ ತುಂಬ ಹಿತ್ತಾಳೆ ಪಾತ್ರೆಗಳನ್ನು ತುಂಬಿ ಗಟ್ಟಿಯಾಗಿ ಪ್ಯಾಕ್  ಮಾಡಿ ರೈಲು ಮೂಲಕ ಕಳುಹಿಸಿದರು. ಹಾಗೂ ಅದರಲ್ಲಿ ೩೦೦ ರೂ. ಗಳನ್ನು ಪಾತ್ರೆಯೊಂದರಲ್ಲಿ ಹಾಕಿದ್ದರಂತೆ. ದೇವನೂರಿಗೆ ಬಂತು. ನಮ್ಮದೊಡ್ಡಪ್ಪರ ಏಕಪುತ್ರ ಅಪ್ಪುರಾವ್ ಎಂಬುವನು ಪೆಟ್ಟಿಗೆ ಒಡೆದು ಹಣವನ್ನು ತೆಗೆದುಕೊಂಡನೆಂದು ನಮ್ಮತಾಯಿ ಹೇಳುತ್ತಿದ್ದರು - ಹೊಸ ಸಂಸಾರ - ಪಾತ್ರೆಗಳ ಅವಶ್ಯಕತೆ. ಅದಕ್ಕಾಗಿ ಬೇಕಾದಷ್ಟು ಪಾತ್ರೆಗಳನ್ನು ಕೊಂಡಿದ್ದರು. ಎಲ್ಲವೂ ಬೇರೆಯವರ ಪಾಲಾಯಿತು.

ದೇವನೂರಿಂದ ಬೆಂಗಳೂರು ಮಲ್ಲೇಶ್ವರದಲ್ಲಿದ್ದ ಎರಡನೇ ದೊಡ್ಡಪ್ಪನ ಹತ್ತಿರಕ್ಕೆ ನಾನು ಮತ್ತು ತಾಯಿಯವರು ಬಂದೆವು. ದಾಯಾದಿ ಮಾತ್ಸರ್ಯಕ್ಕೆ ಪ್ರಾರಂಭ. ಶಿಶುತನದ ನನಗೆ ಆರೈಕೆ ಇಲ್ಲ. ಆಗ ನಮ್ಮ ಅಜ್ಜಿ (ತುಳಸಮ್ಮ) ಬದುಕಿದ್ದರು. 80 ವರುಷದ ಮುದುಕಿಯಾಗಿದ್ದರೂ ಅಡಿಗೆ ಕೆಲಸ ಅವರದೇ ಆಗಿತ್ತು. ತಂದೆ ಸತ್ತ ಕೂಸೆಂದು ನನ್ನನ್ನು ಬಹು ಪ್ರೀತಿಸುತ್ತಿದ್ದರು. ಬೆಳಿಗ್ಗೆ ಸೆಗಣಿ ತರುವ ವ್ಯಾಜದಿಂದ ನನ್ನನ್ನು ಎತ್ತಿಕೊಂಡು ಹೋಗುತ್ತಿದ್ದರು. ಅದಕ್ಕೆ ಮುಂಚೆ ಸ್ವಲ್ಪ ಅರಳಿಟ್ಟು ಕಲಸಿ  ಅದಕ್ಕೆ ಸಾಕಷ್ಟು ತುಪ್ಪವನ್ನು ಯಾರಿಗೂ ಕಾಣದ ಹಾಗೆ ಬೆರಸಿ ದಾರಿಯುದ್ದಕ್ಕೂ ನನಗೆ ತಿನ್ನಿಸುತ್ತಿದ್ದುದು ಈಗಲೂ ಜ್ಞಾಪಕವಿದೆ.ಹೀಗೆ 6-7 ವರ್ಷ ವಯಸ್ಸಾಯಿತು. ನನ್ನ 5ನೇ ವರ್ಷದವರೆಗೂ ತಾಯಿ ಎದೆ ಹಾಲನ್ನು ಕುಡಿಯುತ್ತಿದ್ದುದು ಜ್ಞಾಪಕವಿದೆ. 6ನೇ ವರ್ಷದಲ್ಲಿ ಅದನ್ನು ಬಿಡಿಸಿ ನಂತರ ನಮ್ಮ ತಾಯಿ ಮಡಿ ಆದರು. ದೊಡ್ಡಪ್ಪನ ಮನೆಯಲ್ಲಿ ಮೇಲು ಕೆಲಸವೆಲ್ಲ ನಮ್ಮ ತಾಯಿಯದೇ - ಎಲ್ಲರಿಗೂ ಎಣ್ಣೆ ಹಚ್ಚಿ ಎರೆಯೋದು ಹಾಗಾಯಿತು ಎಲ್ಲಾ ಕೆಲಸ.

6-7 ನೇ ವರ್ಷ - ನಮ್ಮ ತಾಯಿಯ ತಂದೆಯವರು - ಕಡಪ ಸುಬ್ಬರಾಯರೆಂಬುವರು - ಬೆಂಗಳೂರಿಗೆ ಬಂದು ನಮ್ಮನ್ನು ತುಮಕೂರಿಗೆ ಕರೆದೊಯ್ದರು. ಅಲ್ಲಿ 2-3 ವರ್ಷ ವಾಸ. ನಮ್ಮ ಅಜ್ಜನಿಗೆ ಎರಡನೇ ಹೆಂಡತಿ. ನಮ್ಮ ತಾಯಿಯ ತಾಯಿಯು ತೀರಿಕೊಂಡು ಬಹಳ ವರ್ಷಗಳಾಗಿತ್ತು. ಹಾಗೆ ಮೊದಲು ಸಂಬಂಧದಲ್ಲಿ, ನಮ್ಮ ತಾಯಿಯೊಬ್ಬರೇ ಜನನ. ಎರಡನೇ ಸಂಬಂಧದಲ್ಲಿ ಎರಡು ಹೆಣ್ಣು, ಎರಡು ಗಂಡು. ಅದರ ಪೈಕಿ ಒಂದು ಗಂಡು ಹೋಗಿತ್ತು. ಸಂಸಾರ ದೊಡ್ಡದು. ಬರುವ ಸಂಬಳ 30 ರೂ. (accountant in DC’s office). ಇದೇ ಸನ್ನಿವೇಶದಲ್ಲಿ ನಮ್ಮ ಪಿತ್ರಾರ್ಜಿತವಾದ ಶ್ರೀ ರಂಗಪಟ್ಟಣ - ನಗುವನಹಳ್ಳಿಯಲ್ಲಿರುವ ಜಮೀನಿನಲ್ಲಿ ಭಾಗವನ್ನು ಸಾಧಿಸಲು ನಮ್ಮ ಅಜ್ಜಂದಿರು ಹವಣಿಸಿದರು. ಆಗ ಮತ್ತೊಬ್ಬ ವೃದ್ಧರು - ಅವರನ್ನು ತಾತ ಎಂತಲೇ ಕರೆಯುತ್ತಿದ್ದರು - ನಮ್ಮ ಅಜ್ಜನಿಗೆ ಸಂಬಂಧ. ಅವರು ಮೈಸೂರಿಗೆ ಹೋಗಿ ಕೋರ್ಟ್ ನಲ್ಲಿ ವ್ಯಾಜ್ಯ ಹೂಡಲು ಬಯಸಿದರು. ಈ ಕಾರ್ಯ ನಮ್ಮ ತಾಯಿಗೆ ಅಸಮಾಧಾನ. ಯಾಕೆಂದರೆ ನಮ್ಮ ದೊಡ್ಡಪ್ಪನವರು ಶ್ರೀ ಎಂ. ರಾಘವೇಂದ್ರರಾಯರು ಬಹಳ ಒಳ್ಳೇ ಸ್ವಭಾವದವರು. ಅವರ ಮನಸ್ಸನ್ನು ನೋಯಿಸಲು ಇಷ್ಟವಿಲ್ಲ. ಆದರೆ ಒತ್ತಡಕ್ಕೆ ಒಳಗಾಗಬೇಕಾಯಿತು. ನಮ್ಮಲ್ಲಿ ಹಣವಿರಲಿಲ್ಲ. ನಮ್ಮ ತಾಯಿಗೆ ಮದುವೆಯಲ್ಲಿ ಹಾಕಿದ್ದ ಒಡವೆಗಳು ಆ ಹೊತ್ತಿಗೆ ನೆರವಾಯಿತು. ಎಲ್ಲವನ್ನೂ ಮಾರಿದರು. ಸುಮಾರು 800-900 ರೂ ಬಂತೆಂದು ಹೇಳುತ್ತಿದ್ದುದು ಜ್ಞಾಪಕ. ಸರಿ ಮೈಸೂರಿಗೆ ಪ್ರವಾಸ. ಲಾಯರ್ ಮನೆಗೆ ಅಲೆಯೋದು - ಶ್ರೀರಂಗಪಟ್ಟಣದ ಕೋರ್ಟಿಗೆ ಹೋಗಿ ಬರೋದು ಪ್ರಾರಂಭ.

ಆಗ ಒಂದು ಘಟನೆ. ಕಾವೇರಿ ನದಿಯಲ್ಲಿ ಸ್ನಾನಕ್ಕೆ ಹೋಗಿದ್ದೇವೆ. ನಾನು ಸ್ನಾನಕ್ಕೆ ಇಳಿದಿದ್ದೇನೆ. ಪ್ರವಾಹದಲ್ಲಿ ಕೊಚ್ಚಿಹೋಗಬೇಕಿತ್ತು. ‘ತಾತ’ ಎಂಬುವರು ರೆಟ್ಟೆ ಹಿಡಿದು ಈಚೆಗೆ ಹಾಕಿದರು. ಹೀಗೆ ನೀರಿನ ಗಂಡಾಂತರ ಕಳೆಯಿತು.

ತುಮಕೂರಲ್ಲಿ ಪ್ರೈಮರಿ ಸ್ಕೂಲಿಗೆ ಹೋಗುತ್ತಿದ್ದೆ. 3ನೇ ಕ್ಲಾಸಿನಲ್ಲಿ ಓದುತ್ತಿದ್ದ ಜ್ಞಾಪಕ. ತುಮಕೂರಿಗೆ ವಾಪಸು ಬಂದೆವು. ಅಲ್ಲಿಯವರೆಗೆ ಒಡವೆ ಮಾರಿದ ದುಡ್ಡು ಬಹುಭಾಗ ಕೈ ಬಿಟ್ಟು ಹೋಗಿತ್ತು. ಇದಲ್ಲದೆ ನಮ್ಮಅಜ್ಜಂದಿರು ಸಾಲಗಾರರ ಕಾಟ ತಾಳಲಾರದೆ ತಲೆ ಮೇಲೆ ಕೈಯನ್ನಿಟ್ಟು ನಿಟ್ಟುಸಿರು

ಬಿಡುತ್ತಾ ಮನೆಯಲ್ಲಿ ಕುಳಿತಿದ್ದುದನ್ನು ನೋಡಿದ್ದೇನೆ. “ಶೇಷೀ, ನನಗೆ ಹಣ ಕೊಡು “ ಅಂತ ಹೇಳಿ ತೆಗೆದುಕೊಳ್ಳುತ್ತಿದ್ದರು. ನಮ್ಮ ತಾಯಿ ಕೊಡುತ್ತಿದ್ದರು. ಹೀಗಾಗಿ ಕೆಲವೇ ನೂರು ರೂಪಾಯಿ ಉಳಿದಿತ್ತು. ಆಗ ನಮ್ಮ ಮುತ್ತಜ್ಜಿ ಬದುಕಿದ್ದರು. ಅಂದರೆ ನಮ್ಮ ಅಜ್ಜನ ತಾಯಿ. ಅವರು ಉಳಿದ ಹಣವನ್ನು ಶೆಟ್ಟಿಹಳ್ಳಿ ವೆಂಕಟರಮಣಾಚಾರ್ ಎಂಬುವರಲ್ಲಿಟ್ಟು ವರ್ಷಕ್ಕೆ ಸ್ವಲ್ಪ ಬತ್ತ ಬರುವಂತೆ ಮಾಡಿದರು. ಅದು ಅವಲಕ್ಕಿ ತಯಾರಿಸಲು ಅನುಕೂಲವಾಯ್ತು.

ಪುನಃ ನಮ್ಮ ದೊಡ್ಡಪ್ಪ ರಾಘವೇಂದ್ರರಾಯರು ತುಮಕೂರಿಗೆನೇ ಬಂದು ನಮ್ಮನ್ನು ಕರೆದುಕೊಂಡು ಬೆಂಗಳೂರಿಗೆ ಬಂದರು. ಅಷ್ಟು ಹೊತ್ತಿಗೆ ನನಗೆ 8ನೇ ವರ್ಷ.

ಆಗ ಮಲ್ಲೇಶ್ವರದಲ್ಲಿ ಸರ್ಕಾರಿ ಶಾಲೆ ಇದ್ದಿಲ್ಲ. ಒಂದು ಕೂಲಿವಾಡವಿತ್ತು ಅಲ್ಲಿ ಸೇರಿಸಿದರು. ಮರಳಿನ ಮೇಲೆ ಅಕ್ಷರ ಬರೆಯೋದು ಜ್ಞಾಪಕ. ಫೀಜು 8 ಆಣೆ ಜ್ಞಾಪಕ. ಕೆಲವೇ ತಿಂಗಳಲ್ಲಿ ಸರ್ಕಾರಿ ಸ್ಕೂಲು ಬಂತು. ಅಲ್ಲಿ ಸೇರಿದೆ. ಓದುವದಕ್ಕೂ ಮಾತ್ಸರ್ಯವೇ! ನಮ್ಮ ದೊಡ್ಡಪ್ಪನ ಹಿರೇ ಮಗಳು ಪದ್ಮಾವತಿ ಎಂಬುವಳು ನಾನು ಓದುತ್ತಿದ್ದುದನ್ನು ಸಹಿಸಲಿಲ್ಲ. ಪುಸ್ತಕ ಬಚ್ಚಿಡೋದು ಇತ್ಯಾದಿ ಹಿಂಸೆಗೆ ಪ್ರಾರಂಭ. ಆ ಜಾಡ್ಯ ಮನೆಯಲ್ಲಿ ಇತರರಿಗೂ ಹಬ್ಬಿತು. ಅಲ್ಲದೆ ಮನೆಗೆಲಸ ಮಾಡಿಸುತ್ತಿದ್ದರು. ಇವೆಲ್ಲ ಕಾರಣದಿಂದ ನನ್ನ ಓದು ಸಾಗುತ್ತಿದ್ದಿಲ್ಲ.

ಈ ಕಾಲದಲ್ಲಿ ಇನ್ನೊಂದು ಘಟನೆ. ಚಿತ್ರದುರ್ಗದ ಪಾವಘಡದ ಭೀಮಸೇನರಾಯರೆಂಬುವರು ಬಂದರು. ಇವರು ನಮ್ಮ ಅಜ್ಜಿಗೆ ಹತ್ತಿರ ಸಂಬಂಧ. ಅವರು ನನ್ನ ದುರವಸ್ಥೆಯನ್ನು ಕಂಡು ಒಳ್ಳೇ ನಯವಾದ ಹೆಸರಾದ ಕರೀ ಕಂಬಳಿಯನ್ನು ಹೊದಿಯಲು ಕೊಟ್ಟರು. ಮತ್ತೆ ಅನೇಕ ಸ್ತೋತ್ರ ಪಾಠಗಳ ಮುದ್ರಣವನ್ನೂ ಕೊಟ್ಟರು. ಅವರು ಊರಿಗೆ ಹೊರಟು ಹೋದರು. ಒಂದು ದಿನ ನಮ್ಮ ದೊಡ್ಡಪ್ಪನ ಕುದುರೆಗೆ ಖಾಯಿಲೆ ಆಯಿತು. ಚಿಕಿತ್ಸಕರು ಬಂದರು. ಔಷಧಿ ಕೊಟ್ಟು - ಕುದುರೆಯ ಮೈಯನ್ನು ಗಸಗಸ ತಿಕ್ಕಲು ಒಂದು ಕಂಬಳಿಯನ್ನು ಅಪೇಕ್ಷಿಸಿದರು. ಅದೇ ತಾನೇ ನಮಗೆ ಕೊಟ್ಟಿದ್ದ ಕಂಬಳಿ ಮೇಲೆ ಕಣ್ಣು

ಬಿತ್ತು. ಅದನ್ನೇ ತೆಗೆದು ಕೊಟ್ಟರು. ಒಂದೆರಡು ದಿನಗಳು ಆ ರೀತಿ ಉಪಯೋಗಿಸಿ ನಂತರ ನಮ್ಮ ವಶಕ್ಕೆ ಬಂದಿತು.

ನಮ್ಮದೊಡ್ಡಪ್ಪನವರು ಇಂಜಿನಿಯರ್ ಇಲಾಖೆಯಲ್ಲಿ ಓವರ್ಸಿಯರ್ ಆಗಿದ್ದರು. ಬೆಂಗಳೂರಿಂದ ಹೆಗ್ಗಡದೇವನಕೋಟೆಗೆ ಸಬ್ ಡಿವಿಜನ್ ಛಾರ್ಜಿಗೆ ವರ್ಗವಾಯಿತು. ಅಲ್ಲಿಗೆ ಎಲ್ಲರೂ ಹೊರಟೆವು ಅದೇ ಕಾಲದಲ್ಲಿ ನಮ್ಮ ಭಾವ ಅಂದರೆ - ಪದ್ಮಾವತಿ ಬಾಯಿ ಯಜಮಾನರು ಇಂಜಿನಿಯರಿಂಗ್ ಸ್ಕೂಲಿನಲ್ಲಿ ಓದುತ್ತಿದ್ದರು. ಮೈಸೂರಿನಲ್ಲಿ ಅವರಿಗೆ ಅಡಿಗೆ ಮಾಡಿ ಹಾಕಲು ಯಾರೂ ಇದ್ದಿಲ್ಲ. ಆಗ ನಮ್ಮ ತಾಯಿಯನ್ನು ಮೈಸೂರಿಗೆ ಕರೆಸಿ ಬಾಡಿಗೆ ಮನೆ ಮಾಡಿ ಒಂದು ಸಂಸಾರವನ್ನಿಟ್ಟರು. ಹೆಗ್ಗಡದೇವನಕೋಟೆ ಮೈಸೂರಿಗೆ ಸಮೀಪವೇ.

ಹೆಗ್ಗಡದೇವನ ಕೋಟೆಯಲ್ಲಿ ನಮ್ಮ ದೊಡ್ಡಪ್ಪನ ಮಗ ಕೃಷ್ಣಮೂರ್ತಿ ಮತ್ತು ನಾನೂ ಒಂದೇ ಕ್ಲಾಸಿನಲ್ಲಿ ಓದುತ್ತಿದ್ದೆವು. ಆಗಿನ ಅನುಭವ ವಿಚಿತ್ರ. ತಾಯಿಯು ಮೈಸೂರಿನಲ್ಲಿ ನಾನು ಇಲ್ಲಿ. ತಲೆಗೆ ನೀರಿಲ್ಲ. ಆದರೆ ನೀರು ಸೇದಿ ತುಂಬುವ ಕೆಲಸ ಮಾತ್ರ ನನ್ನದು. ಯಾಕೆಂದರೆ ನಮ್ಮ ದೊಡ್ಡಪ್ಪ 'Sitz bath' ಇತ್ಯಾದಿ - Dr Khona's natural treatment ನ್ನು ಅಭ್ಯಾಸ ಇಟ್ಟುಕೊಂಡಿದ್ದರು. ಅದಕ್ಕಾಗಿ ಒಂದು ಟಬ್ಬಿಗೆ ನೀರು ತುಂಬುತ್ತಿದ್ದೆ. ಭಾವಿಯಲ್ಲಿ ಸೇದಿ ತುಂಬುತ್ತಿದ್ದೆ. ಬೆಳಿಗ್ಗೆ ತಂಗಳನ್ನ, ಎಂಜಲು ಕಾಫಿಯೇ ಗತಿ. ಎಲ್ಲರೂ ಕುಡಿದು ಮಿಗಿಸಿದ್ದನ್ನು ಸೇರಿಸಿ, ಅದಕ್ಕೆ ಇನ್ನಷ್ಟು ಹಾಕಿ ನಮ್ಮ ದೊಡ್ಡಮ್ಮ ನನಗೆ ಕೊಡುತ್ತಿದ್ದುದು ಚೆನ್ನಾಗಿ ಜ್ಞಾಪಕ. ಇಂತಹ ಸನ್ನಿವೇಶದಲ್ಲಿ ತಲೆಯಲ್ಲಿ ಹೇನು-ಸೀರು ರಾಶಿಯಾಗಿ ಬಿದ್ದವು. ಜುಟ್ಟನ್ನು ಸಿಕ್ಕು ಬಿಡಿಸಿ ಶುದ್ಧಿ ಮಾಡುವವರಿಲ್ಲ. ಆಗ ಆಫೀಸಿನ ಜವಾನ ವೀರಭದ್ರಪ್ಪ ಎಂಬುವನು - ಈ ಪರಾವಸ್ಥೆಯನ್ನು ನೋಡಿ ಸಂಜೆ ತಾನು ಮನೆಗೆ ಹೋಗುವ ವೇಳೆ ನನ್ನನ್ನು ಕರೆದುಕೊಂಡು ಹೋಗಿ ತನ್ನ ಹೆಂಡತಿ ಕೈಯಲ್ಲಿ ಹೇಳಿ ತಲೆ ಕೂದಲುಗಳನ್ನು ಶುದ್ಧಿ ಮಾಡಿಸುತ್ತಿದ್ದನು. ಹೀಗೆ ಅನೇಕ ದಿವಸಗಳ ನಂತರ ಸರಿ ಹೋಯಿತು.

ಅಲ್ಲಿಯೇ ನನ್ನ ಮುಂಜಿಯ ಪ್ರಸಂಗ. ಕೃಷ್ಣಮೂರ್ತಿಯ ಉಪನಯನ ನಿಶ್ಚಿತವಾಯಿತು. ಅದೇ

ಕಾಲದಲ್ಲಿ ನನ್ನದಕ್ಕೂ ಏರ್ಪಾಟು. ನಮ್ಮ ತಾಯಿ ಮತ್ತು ಭಾವನವರು ಮೈಸೂರಿನಿಂದ ಬಂದರು. ಆದರೆ ನಮ್ಮ ತಾಯಿ ಬಹಿಷ್ಠೆಯಾಗಿದ್ದರು. ಕಣ್ಣಿನಲ್ಲಿ ನೀರು ಸುರಿಸುತ್ತಾ ಹೊರಗಡೆ ದೂರದಲ್ಲಿ ನಿಂತು ನೋಡುತ್ತಿದ್ದರು. ನನಗೆ ಹಸೆ ಮೇಲೆ ಕುಳಿತು ಗಾಯತ್ರಿ ಉಪದೇಶ ಮಾಡಿದವರು - ಆಫೀಸಿನಲ್ಲಿ ಕ್ಯಾಶಿಯರ್ - ಪಾಂಡುರಂಗರಾವ್ ಎಂಬುವರು. ಒಳ್ಳೆ ಆಚಾರ ಶೀಲರು - ವೃದ್ಧರು. ಬಹಳ ಪ್ರೀತಿಯಿಂದ ಉಪದೇಶ ಮಾಡಿದರು. ನಮ್ಮ ದೊಡ್ಡಪ್ಪ ದೊಡ್ಡಮ್ಮ ಹಸೆ ಮೇಲೆ ಕುಳಿತು ಕೃಷ್ಣಮೂರ್ತಿಗೆ ಉಪದೇಶವಾಯಿತು. ನಾಗವಲ್ಲಿ ಆದಮೇಲೆ ಮೆರವಣಿಗೆ - ಇಬ್ಬರಿಗೂ ಎರಡು ಸಣ್ಣಸಣ್ಣ ಕುದುರೆಗಳು. ಆಗ ನೋಡುತ್ತಿದ್ದ ಬಹು ಮಂದಿಗಳು ನನ್ನ ಕಡೆ ನೋಡಿ ಏನೋ ಶ್ಲಾಘನೆ ಮಾಡುತ್ತಿದ್ದರು. ಅಷ್ಟು ಗೊತ್ತು.

ಇಲ್ಲಿ ಇನ್ನೊಂದು ಘಟನೆ - ಒಂದು ಸಲ ನಮ್ಮ ದೊಡ್ಡಪ್ಪ ಉಬ್ಬಸದಿಂದ ಮಲಗಿದರು. 2-3 ದಿನ ಉಲ್ಬಣವಾಯಿತು. ಒಂದು ದಿನ ತಂಗಳು ಅನ್ನ ಮನಸಿಗೆ ಹಿಡಿಸಲಿಲ್ಲ. ಹಳಸಿ ಹೋಗಿತ್ತು. ನಮ್ಮ ದೊಡ್ಡಮ್ಮನ ಮುಂದೆ ಹಾಗೆಯೇ ಹೇಳಿದೆ. ಆದರೆ ಅದಕ್ಕೆ ಉತ್ತರ ಬೈಗಳೇ ಆದವು. "ನೀನು ಮನೆ ಬಿಟ್ಟು ಹೊರಟುಹೋಗು" ಎಂತಲೂ ಅಂದರು. ಹುಡುಗತನ - ಕೂಡಲೇ ಹೇಗಿದ್ದೆನೋ ಹಾಗೇ ಹೊರಟೇ ಬಿಟ್ಟೆ. ನನ್ನ ಸ್ನೇಹಿತರು ಬಹು ಮಂದಿ. ಆಟ ಪಾಠಗಳಲ್ಲಿ ನನ್ನದೇ ಮೇಲುಗೈ. ಅದರಿಂದ ಸ್ನೇಹಿತರು ಬಹು ಪ್ರೀತಿಸುತ್ತಿದ್ದರು. ಗೋಪಾಲಕೃಷ್ಣ ಅಥವಾ ಬಾಲಕೃಷ್ಣ ಎಂಬೊಬ್ಬನ ಮನೆಯಲ್ಲಿ ತಂಗಿದೆ. ಎರಡು ಹೊತ್ತೂ ಬಿಸಿಬಿಸಿಯಾಗಿ ಚೊಕ್ಕ ಭೋಜನ. ಹಾಗೆಯೇ ಸ್ಕೂಲಿಗೇ ಹೋಗೋದು. ಆಟಕ್ಕೆ ಹೋಗೋದು. ಹೀಗಾಯಿತು. ಎರಡು ದಿನ ಅಲ್ಲಿ ಕಳೆದೆ. ಮೂರನೇ ದಿನ ಪಾಂಡುರಂಗ ರಾಯರ ಮನೆ. ಲಕ್ಷ್ಮಣ ರಾಯನೆಂಬುವನು ನನ್ನ ಸ್ನೇಹಿತ. ಅವನು ಕರೆದ. ಅಲ್ಲಿಗೆ ಹೋದೆ. ಅಲ್ಲಿಯೂ ಚೊಕ್ಕ ಭೋಜನ. ಅಷ್ಟು ಹೊತ್ತಿಗೆ ನಮ್ಮ ದೊಡ್ಡಪ್ಪನಿಗೆ ಸ್ವಲ್ಪ ಗುಣಮುಖವಾಗಿತ್ತು. ಮನೆಯಲ್ಲಿ 'ಗೋವಿಂದ ಎಲ್ಲಿ?' ಎಂದು ಕೇಳಿದರು. ಅವನು ಹೊರಗಡೆ ಆಡಲಿಕ್ಕೆ ಎಲ್ಲಿಯೋ ಹೋದನೆಂದು ಉತ್ತರ. ಪಾಂಡುರಂಗರಾಯರು ತಮ್ಮ ಮನೆಯಲ್ಲಿರುವುದನ್ನು ತಿಳಿಸಿ ನನ್ನನ್ನು ಮನೆಗೆ ಕರೆತಂದರು. ನಮ್ಮ ದೊಡ್ಡಪ್ಪ "ಏನೋ ಗೋವಿಂದ, ಯೇಕೆ ಹೋಗಿದ್ದೋ?" ಅಂತ ಕೇಳಿದರು. ಕೂಡಲೇ ಉತ್ತರ "ಕಕ್ಕಿ ಹೋಗು ಅಂದಳು - ಹೋದೆ" ಅಂತ. "ದೊಡ್ಡವರು ಹಾಗೆಂದ ಮಾತ್ರಕ್ಕೆ ಹೋಗುತ್ತಾರೇನೋ? ಹಾಗೆ

ಮಾಡಬಾರದು" ಅಂತ ಬುದ್ಧಿವಾದ ಹೇಳಿದರು. ಅದನ್ನ ಅಲ್ಲಿಗೇ ಮರೆತೆ.

ಅಲ್ಲಿದ್ದಾಗ ಇನ್ನೊಂದು ಘಟನೆ. ಊರಿನ ಸಮೀಪ ಕಾಡು. ಆಗ ಬೇಸಿಗೆ ಆದ್ದರಿಂದ ಬೇಲದ ಹಣ್ಣು, ಮುತ್ತುಗದ ಎಲೆಗಳ ಕಾಲ. ಸ್ನೇಹಿತರೆಲ್ಲ ಸೇರಿ ಹೊರಟೆವು. ಸಾಕಷ್ಟು ಕಿತ್ತಿದೆವು - ಇನ್ನೇನು ಮನೆಗೆ ಹೊರಡಬೇಕೆಂಬಾಗ ಒಂದು ಕಾಡುಕಿರುಬ ಅಡ್ಡ ಹಾಕಿತು. ಸುಮಾರು ಸಂಜೆ. ಎಲ್ಲರೂ ಗಲಾಟೆ ಮಾಡಿ ಹೇಗೋ ಸುರಕ್ಷಿತವಾಗಿ ಮನೆ ಸೇರಿದೆವು. ನಮ್ಮ ಸ್ನೇಹಿತರ ಪೈಕಿ ವೆಂಕಟ ಸುಬ್ಬು ಎಂಬ ಒಬ್ಬ ಅವನು ತಮ್ಮ ತಂದೆಗೆ ನಡೆದ ವಿಷಯ ಹೇಳಿದ. ಅವರು ಕೂಡಲೇ ಸಣ್ಣ ಸಣ್ಣ ಕಲ್ಲು ಹರಳು ಮತ್ತು 4-5 ಮೆಣಸಿನ ಕಾಳು ಸೇರಿಸಿ ಏನೋ ಮಂತ್ರ ಉಚ್ಚರಿಸಿ ಒಂದು ಅರಿವೆಯಲ್ಲಿ ಕಟ್ಟಿ ಇಟ್ಟರು. ಇದನ್ನು ಬಿಚ್ಚೋವರೆವಿಗೂ ಆ ಕಿರುಬ ಬಾಯಿ ತೆಗೆಯಲಾಗುವುದಿಲ್ಲ. ಹಸು ಕರುಗಳನ್ನು ಕೊಲ್ಲಬಾರದೆಂದು ಆ ರೀತಿ ಮಾಡುವ ವಾಡಿಕೆ - ಆ ಕಡೆ ಬಹಳ. ಮರುದಿವಸ ನಾವು ಕೆಲವರು ಕಾಡಿಗೆ ಹೋಗಿ ಅದೇ ಸ್ಥಳದಲ್ಲಿ ಬಿಟ್ಟಿದ್ದ ಮುತ್ತುಗದೆಲೆ ಕಟ್ಟುಗಳನ್ನು ತಂದೆವು. ಅನಂತರ ಅರಿವೆ ಗಂಟನ್ನು ಬಿಚ್ಚಿ ಬಿಸಾಡಿದರು.

ಹೆಗ್ಗಡೆ ದೇವನ ಕೋಟೆಯಲ್ಲಿ ರೆಸ್ಟು ಕನ್ಸರ್ವೇಟರ್ ಸಮ್ಮುಖ ಒಂದು ಸಮಾರಂಭ. ಹುಡುಗರಿಗೆ ಪಂದ್ಯಗಳೇರ್ಪಟ್ಟವು.

1. Running Race
2. Skipping
3. Sack Race ಇತ್ಯಾದಿ

ಎಲ್ಲದರಲ್ಲಿಯೂ ನನ್ನದೇ ಮೊದಲುಗಾರಿಕೆ. ಸಂಜೆ ಬಹುಮಾನ ವಿನಿಯೋಗ. ಕನ್ಸರ್ವೇಟರ್ ರಾಮರಾಯರೆಂಬರು ಬಹು ಶ್ಲಾಘಿಸಿದರು. ಎಲ್ಲರೂ ಕೈ ಚಪ್ಪಾಳೆ ತಟ್ಟಿದರು. ನನಗೆ ಆನಂದವೋ ಆನಂದ.

ನಮ್ಮ ದೊಡ್ಡಪ್ಪನಾದ ಶ್ರೀ ರಾಘವೇಂದ್ರರಾಯರಿಗೆ ಹೆಗ್ಗಡದೇವನಕೋಟೆಯಿಂದ ಚಿಕ್ಕಮಗಳೂರಿಗೆ ವರ್ಗವಾಯಿತು. ಅಷ್ಟು ಹೊತ್ತಿಗೆ ಮೈಸೂರಿನಲ್ಲಿ ಇಂಜನಿಯರಿಂಗ್ ಡಿಪ್ಲೊಮಾಕ್ಕೆ

ಓದುತ್ತಿದ್ದ ನಮ್ಮ ಭಾವನ ಓದು ಪೂರೈಸಿತ್ತು. ಈ ಕಾರಣ ನಮ್ಮ ತಾಯಿ ಹೆಗ್ಗಡದೇವನಕೋಟೆಗೆ ಬಂದು ಸೇರಿಕೊಂಡಿದ್ದಳು. ಎಲ್ಲರೂ ಚಿಕ್ಕಮಗಳೂರಿಗೆ ಬಂದು ಸೇರಿದೆವು.

ಕೋಟೆಯೊಳಗಿದ್ದ ನಮ್ಮ ದೊಡ್ಡಪ್ಪನ ಸ್ವಂತ ಮನೆಯು ಖಾಲಿಯಿದ್ದಿಲ್ಲ. ೪-೫ ತಿಂಗಳು ಬೇಕಾಯಿತು. ಅಲ್ಲಿವರೆಗೆ ಅಲ್ಲಿ ಎ ಕ್ಯುಟಿವ್ ಇಂಜಿನಿಯರ್ ಆಗಿದ್ದ ಶ್ರೀಯುತ ನವರತ್ನ ರಾಮ ರಾಯರ ಬಂಗಲೆಯ ಕಾಂಪೌಂಡಿನಲ್ಲಿ ಒಂದು ಬಿಡದಿ ಮನೆ ಖಾಲಿ ಇತ್ತು. ಅಲ್ಲಿಯೇ ಎಲ್ಲರೂ ವಾಸ ಮಾಡಿದೆವು. ಆಗ ನಮ್ಮ ಸ್ಥಿತಿಗತಿಗಳೆಲ್ಲವು ಆ ಮನೆಯವರಿಗೆ ಗೋಚರವಾಯಿತು. ಅನುಕಂಪ ತೋರಿಸುತ್ತಿದ್ದರು. ಆಗಾಗ್ಗೆ ಕರೆದು ನನಗೆ ತಿಂಡಿ ತೀರ್ಥ ಇತ್ಯಾದಿ ಕೊಡುತ್ತಿದ್ದರು. ಹೀಗಿರುವಾಗ ಕೋಟೆಯ ಮನೆಯು ಖಾಲಿಯಾಯಿತು. ಎಲ್ಲರೂ ಅಲ್ಲಿಗೆ ಹೋದೆವು. ನನ್ನನ್ನು ಸ್ಕೂಲಿಗೆ ಸೇರಿಸಿದ್ದರು. ಒಂದೆರಡು ತಿಂಗಳು ಕಳೆಯಿತು. ನನಗೆ ಬಟ್ಟೆ ಬರೆ ಎಲ್ಲ ಜೀರ್ಣವಾಗಿದ್ದವು. ತಲೆಗೆ ಟೋಪಿಯಂತೂ ಇದ್ದಿಲ್ಲ. ಪಾಠಶಾಲೆಯಲ್ಲಿ ತಲೆಗೆ ಟೋಪಿ ಇಲ್ಲದೆ ಸೇರಿಸುವಂತಿಲ್ಲ. ಹೀಗಾಗಿ ಮನೆಗೆ ಬಂದೆ. ನಮ್ಮ ತಾಯಿಗೆ ಹೇಳಿಕೊಂಡೆ. ಆಗ ನಮ್ಮ ತಾಯಿಯು ದೊಡ್ಡಮ್ಮನಿಗೆ ತಿಳಿಸೆಂದಳು. ಹಾಗೆಯೇ ತಿಳಿಸಿದೆ. ಆದರೆ ಅದಕ್ಕೆ ಪ್ರತಿಫಲ ಸಿಡುಗುಟ್ಟುವಿಕೆ. ಕೊನೆಗೆ "ಟೋಪಿ ಗೀಪಿ ಇಲ್ಲ, ಬೇಕಾದರೆ ಎಲ್ಲಿ ಸಿಗುತ್ತೋ ಅಲ್ಲಿಗೆ ಹೋಗಿ" ಎಂದು ಉತ್ತರ ಬಂತು. ಪುನಹ ನಮ್ಮ ತಾಯಿಗೆ ಆ ಮಾತನ್ನು ತಿಳಿಸಿದೆ. ಆಗ ತಾಯಿಯು ಕಣ್ಣೀರಿಡುತ್ತಾ "ಇನ್ನೊಂದು ಸಲ ಕೇಳಿ ನೋಡಪ್ಪ ಆಮೇಲೆ ನಿರ್ಧರಿಸೋಣ" ವೆಂದಳು. ನಾನು ಹಾಗೆಯೇ ಮಾಡಿದೆ. ಪುನಹ ಅದೇ ಉತ್ತರ ದೊರೆಯಿತು. ‘‘ಸರಿ, ಇನ್ನು ಇಲ್ಲಿ ಇರಲು ಅವಕಾಶವಿಲ್ಲ, ನಿನಗೆ ವಿದ್ಯೆಯೂ ಬರುವುದಿಲ್ಲ, ಇಲ್ಲಿಂದ ಹೊರಡುವುದು ಮೇಲು’’ ಎಂದು ನಿರ್ಧಾರ ಮಾಡಿದಳು ನಮ್ಮ ತಾಯಿ. ಸರಿ ಸುಮಾರು ಹತ್ತು ಘಂಟೆ. ಕಂಕುಳಲ್ಲಿ ಒಂದು ಸೀರೆ ಇರಿಸಿಕೊಂಡು - ಕೈಲಿ ಒಂದು ತಂಬಿಗೆ ಮಾತ್ರ - ಇಷ್ಟು ನಮ್ಮ ತಾಯಿಯ ಸಾಮಾನು. ನಾನು ಪೈಜಾಮ, ಕೋಟು ಹಾಕಿದ್ದೆ. ಇದೇ ಉಡುಪುಗಳಲ್ಲಿ ಮನೆಯಿಂದ ಹೊರಬಿದ್ದೆವು. ಹತ್ತು ಹೆಜ್ಜೆ ಹೋಗುತ್ತಿದ್ದಾಗ ನಮ್ಮ ತಾಯಿ ಕಣ್ಣೀರು ಸುರಿಸುತ್ತಾ "ಇನ್ನೇನ್ನಪ್ಪ ಧ್ರುವ ರಾಯಗೆ ಆದಂತಾಯಿತು, ದೇವರೇ ಕಾಪಾಡಬೇಕು" ಎಂದು ಹಲುಬುತ್ತಾ ಹರಿನಾಮ ಸ್ಮರಣೆ ಮಾಡುತ್ತಾ ಬೀದಿಯಲ್ಲಿ ಹೊರಟೆವು. ಆ ಊರಿನ ಮುಖ್ಯ ರಸ್ತೆ ನವರತ್ನ ರಾಮರಾಯರ ಬಂಗಲೆ ಮುಂಭಾಗದಲ್ಲಿ ಹಾದು ಹೋಗಿತ್ತು. ಹಿಂದೆಯೇ ಅವರ ಬಂಗಲೆ ಕಾಂಪೌಂಡಿನಲ್ಲಿ ವಾಸ ಮಾಡಿದ್ದ ಪರಿಚಯದಿಂದ ನಾವೂ ಸಹ ಅವರನ್ನು ಆಶ್ರಯ ಕೇಳಬೇಕೆಂದೇ ನಿಶ್ಚಯಿಸಿ ಹೊರಟಿದ್ದೆವು. ಅದಕ್ಕೆ

ಸರಿಯಾಗಿ ರಾಮರಾಯರ ಮನೆಯ ಹೆಂಗಸರು ಹೊರಗೆ ಓಡಾಡುತ್ತಿದ್ದರು. ನಾವು ಬರುತ್ತಿದ್ದುದನ್ನ ಕಂಡು ರಾಮರಾಯರ ಹೆಂಡತಿ ಶ್ರೀಮತಿ ಗಂಗಾಬಾಯಿಯವರಿಗೆ ಹುಡುಗರು ತಿಳಿಸಿದರು. ಅಂತೆಯೇ ಆಕೆ ಹೊರಗೆ ಬಂದು ನಮ್ಮನ್ನು ಆಹ್ವಾನಿಸಿದರು. ಅಂದು ನಮಗಾದ ವಿಚಾರವನ್ನು ಕೇಳಿ ಕನಿಕರದಿಂದ ಪ್ರೀತಿಯುತ ಮಾತನಾಡಿದರು. ಕೊನೆಗೆ ಸಂಪೂರ್ಣ ಆಶ್ರಯದಾತರಾದರು. ನಮ್ಮ ತಾಯಿಯನ್ನು ಕುರಿತು "ಏನಮ್ಮಾ, ಯಾವುದಕ್ಕೂ ಆಲೋಚನೆ ಮಾಡಬೇಡಿ. ನಿಮ್ಮ ಮಗನಿಗೆ ಬಟ್ಟೆ-ಬರೆ ನಿಮಗೆ ಸೀರೆ ಇತ್ಯಾದಿ ಹುಡುಗನಿಗೆ ಓದು ಇವನ್ನೆಲ್ಲ ನಾವು ನೋಡಿಕೊಳ್ಳುತ್ತೇವೆ. ಅಕ್ಕ ತಂಗಿಯಂತೆ ನೀವು ನಮ್ಮ ಮನೆಯಲ್ಲಿ ವಾಸ ಮಾಡಿಕೊಂಡಿರಿ" ಎಂದು ಅಭಯ ವಚನವನ್ನು ಕೊಟ್ಟು - ಕೂಡಲೇ ಸ್ನಾನಕ್ಕೆ ಎಬ್ಬಿಸಿ - ತೀರ್ಥ ಪ್ರಸಾದವೂ ಆಯಿತು. ಮನೆಯಲ್ಲಿ ಅನೇಕ ಬಾಲಕ ಬಾಲಕಿಯರು, ಓದುವ ಹುಡುಗರು ಇದ್ದರು. ಕೂಡಲೇ ನನಗೆ ಪಂಚೆ-ಟೋಪಿ ಇತ್ಯಾದಿಗಳು ದೊರೆತವು. ಮಾರನೇ ದಿನದಿಂದ ಪಾಠಶಾಲೆಗೆ ಹೋಗಲು ಪ್ರಾರಂಭಿಸಿದೆ. ಇವರ ಬಂಗಲೆಯ ಕಾಂಪೌಂಡಿಗೆ ಲಗತ್ತಾಗಿಯೇ ಪಾಠಶಾಲೆಯಿತ್ತು. ಸ್ಕೂಲಿನ ಘಂಟೆ ಕೇಳಿದ ಕೂಡಲೇ ಪಾಠಶಾಲೆಗೆ ಹೋಗುತ್ತಿದ್ದೆ. ಎಲ್ಲವೂ ಶ್ರೀಹರಿವಾಯುಗುರುಗಳ ಅನುಗ್ರಹದಿಂದ ಅನುಕೂಲವಾಯಿತು. ಶ್ರೀಯುತ ರಾಯರೂ ಸಹ ದೊಡ್ಡ ಹುದ್ದೆಯಲ್ಲಿದ್ದರೂ ಬಡವರಾಧಾರಿ. ನಮ್ಮನ್ನ ಕಂಡರೆ ಬಹು ವಿಶ್ವಾಸ ಮಾಡುತ್ತಿದ್ದರು. ಶ್ರೀಮತಿ ಗಂಗಾಬಾಯಿಯಂತೂ - ಅವರ ಕಾರುಣ್ಯ ಎಷ್ಟು ಕೊಂಡಾಡಿದರೂ ಸ್ವಲ್ಪವೇ - ಅವರ ಅನುಬಂಧಿಗಳಾದ ಅಯಾಚಿತ ಶೇಷಗಿರಿ ಮತ್ತು ಕರಿಕೇನಹಳ್ಳಿ ರುಜುಸಿಂಹ ಎಂಬ ಇಬ್ಬರು ಹುಡುಗರು ಮತ್ತು ರಾಮರಾಯರ ಹಿರೇಮಗ ಜಯರಾಯ ಎಂಬುವನು - ಹೀಗೆ ಮೂರು ಗಂಡು ಹುಡುಗರ ಜೊತೆಗೆ ನಾನೊಬ್ಬ. ಇಷ್ಟು ಮಂದಿಗೂ ಪ್ರತಿ ಶನಿವಾರ ಮನೆ ಯಜಮಾನಿ ಶ್ರೀಮತಿ ಗಂಗಾಬಾಯಿಯೇ ಎಣ್ಣೆ ಹಚ್ಚಿ ಅಭ್ಯಂಗನ ಸ್ನಾನ ಮಾಡಿಸುತ್ತಿದ್ದರು. ಅಲ್ಲದೆ ತಮ್ಮ ಹೆಣ್ಣುಮಕ್ಕಳು ಕಾ ತಿಂಡಿಗೆ ಕಾದಿದ್ದರೂ ಸಹ ನಾವು ನಾಲ್ಕು ಮಂದಿಗೆ ಮೊದಲು ಕಾ ತಿಂಡಿ ಸಿಗುತ್ತಿತ್ತು. ಕಾರಣವೇನೆಂದರೆ - ನಾವು ಬೆಳಿಗ್ಯೆ - ಮಾರ್ಕೆಟ್ಟಿಗೆ ಹೋಗಿ ತರಕಾರಿ ಇತ್ಯಾದಿ ತರುತ್ತಿದ್ದೆವು - ಇದೇ ಕಾರಣ ಮೊದಲು ಕಾ . ತಿಂಡಿ ಎಂದರೆ ಉಪ್ಪಿಟ್ಟು ಅಥವಾ ಕರಿದ ಪದಾರ್ಥ ಚಕ್ಕುಲಿ, ಖಾರಾಸೇವು, ತೇಂಗಲು ಇತ್ಯಾದಿ. ಈ ಕಾ ತಿಂಡಿ ಹಂಚುವಿಕೆಯಲ್ಲಿ ಯಾವ ಭೇದವನ್ನೂ ಮಾಡುತ್ತಿದ್ದಿಲ್ಲ. ತಮ್ಮ ಮಕ್ಕಳಿಗೆ ಹೇಗೊ ಹಾಗೆಯೇ ಅಥವಾ ಇನ್ನೂ ಹೆಚ್ಚಿನ ಪಾಲೇ ನಮಗೆ ದೊರೆಯುತ್ತಿತ್ತು.

ಶೇಷಗಿರಿ ಎಂಬುವನು ಶ್ರೀಮತಿ ಗಂಗಾಬಾಯಿಯ ಸದ್ಯ ತಮ್ಮನಾಗಬೇಕು. ರುಜಸಿಂಹನೆಂಬುವನು ಸಂಬಂಧಿಗನೇ ಸರಿ. ಈತನು ಪ್ರೌಢಶಾಲೆಯಲ್ಲಿ ಓದುತ್ತಿದ್ದನು. ಮಿಕ್ಕ ಮೂರು ಮಂದಿ ಮಾತ್ರ ಮಿಡಲ್ ಸ್ಕೂಲಿನಲ್ಲಿ ಇದ್ದೆವು. ಈ ನಡುವೆ ನಮ್ಮ ತಾಯಿಯ ಸ್ವಭಾವ ಬಲು ದಾಕ್ಷಿಣ್ಯ. ಹೀಗಾಗಿ ಇತರರಿಗೆ ವಹಿಸಿದ ಕೆಲಸಗಳನ್ನು ತಾವೇ ಮಾಡಿ ಬಿಡುತ್ತಿದ್ದರು. ಹೀಗಾಗಿ ಕ್ರಮೇಣ ಸೀರೆಗಳನ್ನು ಒಗೆಯುವುದು, ಪಾತ್ರೆ ತೊಳೆಯುವುದು, ರಾತ್ರಿ ಕಾಲದ ಅಡಿಗೆ ಸಾರಣೆ ಇವೆಲ್ಲ ನಮ್ಮ ತಾಯಿಯ ಕೆಲಸವೇ ಆಯಿತು. ಮನೆಯಲ್ಲಿ ಇಬ್ಬರು ಅಡಿಗೆಯವರು ಇದ್ದರು. ಒಬ್ಬ ಸರ್ಕೀಟಿಗೆ - ಮತ್ತೊಬ್ಬ ಮನೆಯಲ್ಲಿ ಅಡಿಗೆಗೆ. ಗಂಡಸರ ಬಟ್ಟೆ ಒಗೆಯೋದು, ಮುಸರೆ ತಿಕ್ಕೋದು, ಅಂಗಳ ಬಳಿಯೋದು ಇತ್ಯಾದಿಗೆ ಪ್ರತ್ಯೇಕ ಪ್ರತ್ಯೇಕ ಆಳುಗಳಿದ್ದರು. ಯಾವುದಕ್ಕೂ ಕೊರತೆ ಇದ್ದಿಲ್ಲ.

ಸಾಮಾನ್ಯವಾಗಿ ಗಂಡು ಹುಡುಗರ ಕೆಲಸವೆಂದರೆ - ಅಂಗಡಿ ಮುಂಗಟ್ಟಿಗೆ ಹೋಗಿ ಸಾಮಾನು ತರೋದು - ತಿಂಗಳಿಗೊಂದು ಸಲ ಒಟ್ಟಿಗೆ ಸಾಮಾನು ತರುತ್ತಿದ್ದೆವು. ಬೆಣ್ಣೆ ಕಾಯಿಸಿದ ತುಪ್ಪ ವೆಂಕ ಧಾರಾಪುರದಿಂದ ಟಿನ್ನುಗಳು ಬರುತ್ತಿದ್ದವು. ಅವರ ಮನೆಗೆ ಒಂದು ಟಿನ್ - ಅಂದರೆ ಸೀಮೆ ಎಣ್ಣೆ ಟಿನ್ ಸೈ - ಒಂದು ಡಬ್ಬ ತರುತ್ತಿದ್ದೆವು. ಧಾರಾಳವಾಗಿ ಬಳಸುತ್ತಿದ್ದರು. ಪಂಕ್ತಿ ಭೇದವಿಲ್ಲ. ಬಡವ - ಭಾಗ್ಯವಂತ ಎಂಬ ಭೇದವಿಲ್ಲ. ಊಟ ತಿಂಡಿಗಳಲ್ಲಿ ಎಲ್ಲರಿಗೂ ಸಮಪಾಲೇ ಇತ್ತು. ಸಾಮಾನ್ಯವಾಗಿ - ರಾಯರು ಊರಲ್ಲಿದ್ದಾಗ - ರಾತ್ರಿ ಹೊತ್ತಲ್ಲಿ ಊಟವಾದ ಮೇಲೆ - ಕಾಲು ವತ್ತಿಸಿ ಕೊಳ್ಳುತ್ತಿದ್ದರು. ಈ ಕೆಲಸ ನನಗೂ ಮತ್ತು ಶೇಷಗಿರಿಗೂ ಬೀಳುತ್ತಿತ್ತು. ಅಂದರೆ ಸಾಮಾನ್ಯವಾಗಿ ರಾತ್ರಿ ಊಟವಾದ ಮೇಲೆ ಓದಲಿಕ್ಕೆ ಅವಕಾಶವಾಗುತ್ತಿದ್ದಿಲ್ಲ. ಊಟವಾದ ಕೂಡಲೇ ನಾನು ನಮ್ಮ ತಾಯಿಗೆ ಕೆಲಸಗಳಲ್ಲಿ ಸಹಾಯ ಮಾಡುತ್ತಿದ್ದೆ. ಎಂಜಲು ಬಳಿಯೋದು, ಗೋಮಯ ಸಾರಿಸೋದು, ತಟ್ಟೆ ತೊಳೆಯೋದು, ಮನೆ ಸಾರಿಸೋದು ಈ ಕೆಲಸಗಳಲ್ಲಿ ನಮ್ಮ ತಾಯಿಗೆ ನೆರವಾಗುತ್ತಿದ್ದೆ. ಅವರು ಒಬ್ಬರನ್ನೇ ಬಿಟ್ಟು ನಾನು ಓದಿಕೊಳ್ಳಲು ಮನಸ್ಸಾಗುತ್ತಿರಲಿಲ್ಲ. ಹೀಗಾಗಿ ನಾವಿಬ್ಬರೂ 9-9 1/2 ಘಂಟೆಗೆ ಕೆಲಸ ಪೂರೈಸಿ ಮಲಗಲಿಕ್ಕೆ ಬರುತ್ತಿದ್ದೆವು. ಆಗ ರಾಯರಿಗೆ ಕಾಲು ಒತ್ತುವುದು ಬೀಳುತ್ತಿತ್ತು. ಸರಿ, 10-10 1/2 ವರೆಗೆ ಆ ರೀತಿ ಕೆಲಸವಾದ ಮೇಲೆ ತೂಕಡಿಕೆ ಬಂದು ಮಲಗುತ್ತಿದ್ದೆ. ಓದಿಕೊಳ್ಳಲು ಆಗುತ್ತಿರಲಿಲ್ಲ.

ಬೆಳಿಗ್ಗ ಕಾಫಿ ತೆಗೆದುಕೊಂಡು ಓದಲಿಕ್ಕೆ 9 ಗಂಟೆ ವರೆಗೆ ಕೂರುತ್ತಿದ್ದೆವು. ನಂತರ ಸ್ನಾನ, ಸಂಧ್ಯಾವಂದನೆ, ಅಂಗಡಿ ಕೆಲಸ - ಇವೆಲ್ಲಾ ಆಗುವ ವೇಳೆಗೆ 10 ಘಂಟೆ ಆಗುತ್ತಿತ್ತು. ಊಟ ಮಾಡಿ 11 ಘಂಟೆ ಹೊಡೆಯುತ್ತಿರುವಾಗ ಸ್ಕೂಲಿಗೆ ಹೋಗುತ್ತಿದ್ದೆವು. ಪಾಠಶಾಲೆ ಬದಿಯಲ್ಲೇ ಇದ್ದುದರಿಂದ ಮಧ್ಯಾಹ್ನ ಊಟಕ್ಕೆ ಎಲ್ಲರೂ ಬರುತ್ತಿದ್ದೆವು. ಮಧ್ಯಾಹ್ನ ಊಟವಾದ ಮೇಲೆ ಕಾಫಿಯನ್ನೂ ಕೊಡುತ್ತಿದ್ದರು. ಸಂಜೆ ಸ್ಕೂಲಿನಿಂದ ಬಂದ ಕೂಡಲೇ ಏನಾದರೂ ತಿಂಡಿ ಸಿಗುತ್ತಿತ್ತು. ಅನಂತರ ಚೆಂಡಾಟವೋ, ಕ್ರಿಕೆಟ್ ಆಟವೋ ಅಥವಾ ಚಿಣ್ಣಿಕೋಲು, ಗೋಲಿ, ಕೊಕ್ಕಾಟ, 'ಒಲ್ ಚಿಪಳು' ಅಂತ ಹಿಂದೆ ಕರೆಯುತ್ತಿದ್ದರು - ಅದಕ್ಕೆ ಈಗ ------------------ ಕರೆಯುತ್ತಾರೆ. ಆಟ ಮುಗಿಸಿಕೊಂಡು ಸುಮಾರು 7 ಗಂಟೆಗೆ ಮನೆಗೆ ಬರುತ್ತಿದ್ದೆವು. ಬಂದ  ಕೂಡಲೇ ಸಂಧ್ಯಾ ಮುಗಿಸಿ ಓದಲಿಕ್ಕೆ ಕೂಡುತ್ತಿದ್ದೆ. ಸರಿ, 8 ಘಂಟೆಗೆ ರಾತ್ರಿ ಊಟ. ರಾಯರ ಅಳಿಯಂದಿರು ಶ್ರೀ ಜಹಗೀರ್ದಾರ್ ಕೃಷ್ಣಮೂರ್ತಿಗಳು ಅಂತ ಇದ್ದರು. ಅವರು ಇಂಗ್ಲಿಷ್ ಪಾಠವನ್ನು ಆಗಾಗ್ಗ ಹೇಳಿಕೊಡುತ್ತಿದ್ದರು. ಅವರಿಗೆ ಅದೇ ಊರಲ್ಲಿ ಇಂಜಿನಿಯರ್  ಆಫೀಸಿನಲ್ಲೇ ಕಾರ್ಕೂನರಾಗಿ ಕೆಲಸವಿತ್ತು.

ಈ ವ್ಯವಸ್ಥೆಯಲ್ಲಿ ಅನೇಕ ವರ್ಷಗಳು ಲೀಲಾಜಾಲವಾಗಿ ಕಳೆದುಹೋಯಿತು. ನಾನು ಲೋಯರ್ ಸೆಕೆಂಡರಿ ಪರೀಕ್ಷೆಗೆ ಕಟ್ಟಿದ್ದೆ. ಆ ವರ್ಷ ಶ್ರೀ ಉಡುಪಿ ಕ್ಷೇತ್ರದಲ್ಲಿ ಪರ್ಯಾಯೋತ್ಸವ. ನಮ್ಮ ತಾಯಿ ಉತ್ಸವಕ್ಕೆ ಹೊರಡಲು ಸಿದ್ಧ ಮಾಡಿಕೊಂಡರು. ಆಗ ಇನ್ನೂ ಬಸ್ಸುಗಳಿದ್ದಿಲ್ಲ. ಎತ್ತಿನ ಗಾಡಿ ಪ್ರಯಾಣ - ಶಿವಮೊಗ್ಗ ಆಚೆ: ಆಗ ಶ್ರೀ ಶ್ರೀ 108 ಶ್ರೀ ಸತ್ಯಜ್ಞಾನರ ಕಾಲ. ನೂರಾರು ಗಾಡಿಗಳು ಸಿದ್ಧವಾದವು ಪ್ರಯಾಣಿಕರಿಗೆ. ಉಡುಪಿ ಸೇರಿದೆವು. ಅಲ್ಲಿನ ಯಾತ್ರಾ ಮುಗಿಸಿಕೊಂಡು ಬರುವ ವೇಳೆಗೆ 15 - 20  ದಿನಗಳಾಯಿತು. ಈ ಕಾಲದಲ್ಲಿ ಮನೆಯಲ್ಲಿ ಅನೇಕ ಕೆಲಸಗಳನ್ನು ಮಾಡುವುದು ನನ್ನ ಪಾಲಿಗೆ ಬಿತ್ತು. ಇದರಿಂದಾಗಿ ಪರೀಕ್ಷೆಗೆ ಸಿದ್ಧತೆಯಾಗಲು ಸಾಧ್ಯವಾಗಲಿಲ್ಲ. ಈ ಕಾರಣ ಆ ವರ್ಷ ಪರೀಕ್ಷೆಯಲ್ಲಿ ತೇರ್ಗಡೆ ಆಗಲಿಲ್ಲ.

ಮುಂದಿನ ವರ್ಷ ಪರೀಕ್ಷೆಯಲ್ಲಿ ವಿಜೇತನಾದೆ. ಪ್ರೌಢ ಪಾಠಶಾಲೆಗೆ ಸೇರಿದೆ. ಆಗ ಒಂದು ಚಿಕ್ಕ ಘಟನೆ. ಇದು ಕೇವಲ ಹುಡುಗುತನದ ಅವಿವೇಕ. ಎರಡನೇ ಭಾಷೆಗೆ ಸಂಸ್ಕೃತಕ್ಕೆ ಸೇರಿದೆ. ಕೆಲವು

ದಿನಗಳ ನಂತರ ಉಪಾಧ್ಯಾಯರು ಸಂಸ್ಕೃತ ಕಾಪೀ ಬರೆದುಕೊಂಡು ಬಂದಿಲ್ಲವೆಂಬ ಕಾರಣ ಶಿಕ್ಷೆ ಮಾಡಿದರು. ಅದನ್ನು ಸಹಿಸದೆ ಕೋಪದಿಂದ ಹೋಗಿ ಕನ್ನಡಕ್ಕೆ ಸೇರಿಕೊಂಡೆ. ಇದೇ ಅವಿವೇಕತನ.

ಕನ್ನಡಕ್ಕೆ ಉಪಾಧ್ಯಾಯರು ಶ್ರೀ ಅಪ್ರಮೇಯಯ್ಯಂಗಾರ್ ಎಂಬುವರು ಇದ್ದರು. ಅವರು ದ್ವಿಭಾಷಾ ಪಂಡಿತರು. ಸಂಸ್ಕೃತದಲ್ಲಿ 'ವೇಣೀ ಸಂಹಾರ' ನಾಟಕದ ಅಭಿನಯ ಕಲಿಸಲು ಹವಣಿಸಿದರು. ಅದರಲ್ಲಿ ನನ್ನ ಪಾರ್ಟು ಅಶ್ವತ್ಥಾಮ. ಚೆನ್ನಾಗಿ ಅಭಿನಯಿಸಿ ಹೇಳುತ್ತಿದ್ದೆ. ಉಪಾಧ್ಯಾಯರ ಮೆಚ್ಚಿಗೆ ಇತ್ತು.

ಹಾಗೆಯೇ 5th ಫಾರಂಗೆ ಬಂದೆ. ಆಗ ಇಂಗ್ಲೀಷಿನಲ್ಲಿ 'ಮರ್ಚೆಂಟ್ ಆಫ್ ವೆನಿಸ್' ಎಂಬ ನಾಟಕವನ್ನು ಆಡಲು ಏರ್ಪಾಟು ಆಯಿತು. ಅದರಲ್ಲಿ ನನ್ನ ಪಾರ್ಟು 'ಶೈಲಾಕ್'. ಅಲ್ಲಿಯೂ ಕೂಡ ಬಹಳ ಮೆಚ್ಚಿನವನಾದೆ. ಹೀಗೆ ಚಿಕ್ಕಮಗಳೂರಲ್ಲಿ 6th ಫಾರಂ ಅಥವಾ ಮೆಟ್ರಿಕ್ಯುಲೇಷನ್ ತರಗತಿಗೆ ಬಂದೆ. ಆ ವರ್ಷ ಪ್ರಥಮತಃ S.S.L.C ಎಂಬುದು ಪ್ರಾರಂಭ. ಪರೀಕ್ಷೆಯಲ್ಲಿ ತೇರ್ಗಡೆ ಆಗಲಿಲ್ಲ. ಇಷ್ಟರಲ್ಲಿ ನವರತ್ನ ರಾಮರಾಯರಿಗೆ ಚಿತ್ರದುರ್ಗಕ್ಕೆ ವರ್ಗವಾಯಿತು. ಎಲ್ಲರೂ ಹೊರಟೆವು.

ಅಲ್ಲಿಯೂ ದೊಡ್ಡ ಬಂಗಲೆ. ಅಡಿಗೆಯವ, ಆಳುಗಳು ಇತ್ಯಾದಿ ಎಲ್ಲ ಸೌಕರ್ಯಗಳೂ ಇದ್ದುವು. ಅಲ್ಲಿ ಪ್ರೌಢಶಾಲೆ SSLC ತರಗತಿಗೆ ಸೇರಿದೆ. ಆ ವರುಷ ದುರಾದೃಷ್ಟಕ್ಕೆ ತೇರ್ಗಡೆ ಅಥವಾ ಇಲ್ಲ ಎಂಬ ನಿರ್ಣಯ ಕೊಡದೇ ಕೇವಲ ನಂಬರುಗಳನ್ನು ಪ್ರಕಟಿಸಿದರು. ಕಾಲೇಜಿಗೆ ಸೇರುವುದು ಅದೃಷ್ಟದ ಮೇಲೆ ನಿಂತಿತು. ಬೆಂಗಳೂರು ಕಾಲೇಜಿನಲ್ಲಿ - ಟ್ವೈಟ್ (Twite) ಎಂಬ ಇಂಗ್ಲೀಷಿನವನು ಪ್ರಾಧ್ಯಾಪಕನಾಗಿದ್ದನು. ನನ್ನ ಜೊತೆಯಲ್ಲಿ ರಾಮರಾಯರ ಮನೆಯಲ್ಲಿಯೇ ಮತ್ತೊಬ್ಬ ಅವರ ಸಂಬಂಧಿಕ 'ಮಧ್ವೇಶ' ಎಂಬುವನೂ ಓದುತ್ತಿದ್ದ. ಇಬ್ಬರದೂ ಪರೀಕ್ಷೆಯಲ್ಲಿ ಸುಮಾರು ಸಮಾನಾಂಕ ನಂಬರುಗಳು. ವಿಚಾರಿಸಿದ್ದಲ್ಲಿ ಇಬ್ಬರಿಗೂ ಕಾಲೇಜು ಪ್ರವೇಶ ಸಾಧ್ಯವೆಂದರು. ನಾವಿಬ್ಬರೂ ಹೋಗಿ ಟ್ವೈಟ್ ಸಾಹೇಬನ್ನ ಕಂಡೆವು. 'ವಿಚಾರ ಮಾಡಿ ಬೋರ್ಡಿನ ಮೇಲೆ ತಿಳಿಸುತ್ತೇವೆ' ಎಂದರು. ಕೊನೆಗೆ ಪ್ರವೇಶವಿಲ್ಲವೆಂದಾಯಿತು. ಶ್ರೀ ಹರಿ ಚಿತ್ತ.

ಇದೇ ಸನ್ನಿವೇಶದಲ್ಲಿ ಶ್ರೀ ರಾಮರಾಯರು ರಿಟೈರು ಆಗುವ ಮುನ್ನ ಕೆಲವು ತಿಂಗಳು ರಜಾ ತೆಗೆದುಕೊಂಡು ಬೆಂಗಳೂರು ಚಾಮರಾಜಪೇಟೆ 3ನೇ ಮೇನ್ ನಲ್ಲಿ ಇರುವ ಸ್ವಂತ ಬಂಗಲೆಗೆ ಬಂದಿದ್ದರು. ಆಗ ಅವರ ಬಂಧುಗಳೇ ಆದ ಶ್ರೀ ದೇವನಹಳ್ಳಿ ಶ್ಯಾಮರಾವ್, ಅಡ್ವೋಕೇಟ್, ಎಂಬುವರ ಪರಿಚಯವಾಯಿತು. ಅಷ್ಟು ಹೊತ್ತಿಗೆ ಮದರಾಸ್ ಪಚ್ಚೈಯಪ್ಪ ಕಾಲೇಜಿಗೆ ಅಪ್ಲಿಕೇಷನ್ ಹಾಕಿಕೊಂಡಿದ್ದೆ. ಸೀಟು ಸಿಕ್ಕಿತು. ಆದರೆ, ಹಣವ್ಯಾರು ಕೊಡಬೇಕು? ಈ ಸನ್ನಿವೇಶದಲ್ಲಿ ಶ್ಯಾಮರಾವ್ ಎಂಬುವರು ತಿಂಗಳಿಗೆ 10 ರೂ ಕೊಡುತ್ತೇನೆಂದರು. ಊಟ ತಿಂಡಿಗೆ ಅನುಕೂಲವಿತ್ತು. ರಾಮರಾಯರ ಹಿರೇ ಅಳಿಯಂದಿರು ಮದರಾಸಿನಲ್ಲಿ ಸ್ಟೇಷನರಿ ವ್ಯಾಪಾರಿಗಳಾಗಿದ್ದರು. ಅವರ ಆಶ್ರಯವಿತ್ತು. ಆಗಿನ ಕಾಲದಲ್ಲಿ ಹೆಚ್ಚು ಖರ್ಚು ಇದ್ದಿಲ್ಲ. ಅಲ್ಲದೆ ಇನ್ನೊಂದು ಮಾರ್ಗವೂ ಇತ್ತು. ಮದರಾಸಿನಲ್ಲಿ 'ಅಪ್ಪರ್ ಸಬಾರ್ಡಿನೇಟ್ ಕೋರ್ಸ್' ಗೆ ಸೇರುವ ಅವಕಾಶವೂ ಇತ್ತು. ಹೀಗಿದ್ದರೂ ದೊಡ್ಡ ಪ್ರತಿಬಂಧಕವಿತ್ತು. ನಮ್ಮ ಮಾತೋಶ್ರಿಯರು  ನನ್ನನ್ನು ಬಿಟ್ಟು ಘಳಿಗೆ ಇರಲಾರೆ ಎಂದರು. ನನ್ನ ಆಗುಹೋಗುಗಳಿಗೆಲ್ಲ ಅವರೇ ಆಗಿರುವಾಗ ಅವರ ಇಚ್ಛೆಗೆ ಪ್ರತಿಯಾಗಿ ಹೋಗಲು ಮನಸ್ಸು ಒಡಂಬಡಲಿಲ್ಲ. ಮದರಾಸಿನ ಯೋಚನೆ ಕೈ ಬಿಟ್ಟು ಇನ್ನೂ ಉಳಿದಿರೋದು ಯಾವುದಾದರೂ ಡಿಪ್ಲೋಮ ಕೋರ್ಸಿಗೆ ಸೇರಬೇಕಾದ್ದೆ. ಆಗ ಸ್ಕಾಲರ್ ಷಿಪ್ ಕೊಟ್ಟು (1) Forestry (ಅರಣ್ಯ ಶಾಖಾ) (2 ) Veterinary (3) LMP course  (4) Police Inspector's  course ಇತ್ಯಾದಿಗಳು ತೆರೆಯಲ್ಪಟ್ಟಿದ್ದವು. ಸ್ವಾಭಾವಿಕವಾಗಿ ಧರ್ಮಾಚರಣೆ ಸದಾಚಾರಿಗಳಿಗೆ ಮೊದಲಿನಿಂದಲೂ ಆ ಕಡೆ ಮನಸ್ಸು. LMP ಇತ್ಯಾದಿಗಳಿಗೆ ಸೇರಿದರೆ ಶವಗಳನ್ನು ಕೊಯ್ಯಬೇಕು. Police ಇಲಾಖೆಗೆ ಸೇರಿದರೆ ಆಚಾರಕ್ಕೆ ಅವಕಾಶವಿಲ್ಲ ಇತ್ಯಾದಿ, ಹೀಗೆ ಚರ್ಚೆಗಳು ತಂಡೋಪತಂಡವಾಗಿ ಮನೋ ಭೂಮಿಕೆಯಲ್ಲಿ ಹೊರಟು, ಕೊನೆಗೆ ಇಂಜಿನಿಯರಿಂಗ್ ಡಿಪ್ಲೋಮ ಕೋರ್ಸಿಗೆ ಓದಲು ನಿರ್ಧಾರವಾಯಿತು.

ಈ ವೇಳೆಗೆ ಬೆಂಗಳೂರು ಕಂಟೋನ್ಮೆಂಟಿನಲ್ಲಿ ಆರ್ಕಾಟ್ ನಾರಾಯಣಸ್ವಾಮಿ ಪಾಠಶಾಲೆಯಲ್ಲಿ ಇಂಜಿನಿಯರಿಂಗ್ ಡಿಪ್ಲೋಮ ಕೋರ್ಸು ಬಹಳ ವರ್ಷಗಳಿಂದಲೂ ತೆರೆದಿತ್ತು. ಅಲ್ಲಿಯ ಸೂಪರಿಂಟೆಂಡೆಂಟರು ನಮ್ಮ ದೊಡ್ಡಪ್ಪನಿಗೆ  ಬೇಕಾದವರು. ಈ ಕಾರಣ ನನ್ನನ್ನು ಕರೆದುಕೊಂಡು ಸೂಪರಿಂಟೆಂಡೆಂಟರ ಮನೆಗೆ ಹೋಗಿ ವಿಚಾರ ತಿಳಿಸಿ, ಸೀಟು ಕೊಡುವಂತಾಯಿತು. ಸರಿ ಅಲ್ಲಿಗೆ ಸೇರಿದೆ.

ಇಷ್ಟು ಹೊತ್ತಿಗೆ ನಮ್ಮ ಪಿತ್ರಾರ್ಜಿತವಾದ, ಶ್ರೀರಂಗಪಟ್ಟಣಕ್ಕೆ ಸೇರಿದ ಬತ್ತದ ಜಮೀನುಗಳು ನಮ್ಮ ವಶವಾದವು. ಹೇಗೆಂದರೆ - ನಮ್ಮ ದಿವಂಗತ ದೊಡಪ್ಪನ ಹೆಂಡತಿ ಕಾಶಿ ವೆಂಕೂಬಾಯಿ ಜೀವನಾಂಶಕ್ಕೆ ಅರ್ಜಿ ಸಲ್ಲಿಸಿ ಜಮೀನು ಪಾಲಾಗದಂತೆ ಅಡಚಣೆ ಮಾಡ್ದಿದರು. ಕೊನೆಗೆ ಕೋರ್ಟು ತೀರ್ಪಿನಂತೆ ಆಕೆಗೆ ಜೀವನಾಂಶಕ್ಕೆ 900 ರೂ. ಕೊಟ್ಟು ಜಮೀನುಗಳನ್ನು ವಶಕ್ಕೆ ತೆಗೆದುಕೊಂಡು ಕೇವಲ 3 - 4 ವರ್ಷಗಳಾಗಿತ್ತು. ಆಗ ಬತ್ತದ ಧಾರಣೆ 6 ರೂ. ಪಲ್ಲಕ್ಕೆ. ಆ ರೀತಿ ಬತ್ತ ಮಾರಿದ ಹಣವನ್ನು ಶೇಖರಿಸಿದ್ದರು. 3 ಭಾಗ ಮಾಡಿ - ನನ್ನ ಭಾಗಕ್ಕೆ ಸುಮಾರು 300 ರೂಗಳು ಬಂದವು. ಅದನ್ನು ನಮ್ಮ ದೊಡಪ್ಪನವರು ಚಿಕ್ಕಮಗಳೂರಲ್ಲಿರುವಾಗಲೇ ಕೊಟ್ಟಿದ್ದರು. ಆ ಮೊಬಲಗನ್ನು ಶ್ರೀ ರಾಮರಾಯರ ಪತ್ನಿಗೆ ಸಾಲವಾಗಿ ಕೊಟ್ಟು ಅದರ ಬಡ್ಡಿಯಲ್ಲಿ ಫೀಜು ವಗೈರೆ ಖರ್ಚು ಮಾಡಿಕೊಳ್ಳುತ್ತಿದ್ದೆವು. ಅದು ಈಗ ವದಗಿ  ಬಂತು. ಇಂಜಿನಿಯರಿಂಗ್ ಸ್ಕೂಲಿಗೆ ಸೇರಿ ಓದುತ್ತಾ ಇದ್ದೆ. ಇಲ್ಲಿಗೆ 1914 - 15 ನೇ ಇಸವಿ. ಮೊದಲ ವರ್ಷದ ಅಂತ್ಯದಲ್ಲಿ ಪರೀಕ್ಷೆಯಾದಮೇಲೆ ಸ್ಕೂಲಿನಿಂದ ಪ್ರವಾಸಕ್ಕೆ ಹೊರಟೆವು. ವಾಣಿಯಂಬಾಡಿ ಎಂಬಲ್ಲಿಗೆ ಹೋಗಿ ಅಲ್ಲಿ 'compass survey' ಇತ್ಯಾದಿಗಳನ್ನು ನಡೆಸಿ ಎಲ್ಲರ ಜೊತೆಯಲ್ಲಿ ಶ್ರೀರಂಗಕ್ಕೆ ಸೇರಿದೆವು. ಅಲ್ಲಿಗೆ ನಮ್ಮ ಪ್ರವಾಸ ತೀರಿತು. ಆದರೆ ನಾನು ಮತ್ತು ನರಸಿಂಹಯ್ಯ ಎಂಬುವರು ರಾಮೇಶ್ವರಕ್ಕೆ ಹೋಗಿ ಕ್ಷೇತ್ರದರ್ಶನ, ಪಿತೃ ಕಾರ್ಯಗಳ ಮಾಡಿ ಬಂದೆವು. ಸೇತುಸ್ನಾನವೂ ಆಯಿತು.

ಏತನ್ಮಧ್ಯೆ ನನಗೆ ಕನ್ಯೆಗಳು ಬರಲಿಕ್ಕೆ ಪ್ರಾರಂಭ. ನಮ್ಮ ತಾಯಿಗೇನೋ ಬೇಗ ಲಗ್ನ ಮಾಡಬೇಕೆಂಬ ಆಶೆ. ಆದರೆ ಕೆಲಸವಾಗದೆ ಮಾಡಿಕೊಳ್ಳಲು ನನಗೆ ಸಮ್ಮತಿ ಇದ್ದಿಲ್ಲ. ಆದ್ದರಿಂದ ಬೇಡವೆಂದು ನಿರಾಕರಿಸುತ್ತಿದ್ದೆ.

ಇಂತಹ ಸನ್ನಿವೇಶದಲ್ಲಿ ಮೈಸೂರಿನ ಶ್ರೀ C.N. ಯಾದವಮೂರ್ತಿರಾಯರ ಮಗಳಿಗೆ ವರಾನ್ವೇಷಣಕ್ಕಾಗಿ - ಶ್ರೀಯುತ ಸೊಸೈಟಿ ರಾಮರಾಯರೆಂಬುವರು ಬಂದರು. ಈತನಿಗೂ ನಮ್ಮ ತಾಯಿಗೂ ಹಿಂದಿನಿಂದಲೂ ಪರಿಚಯ. ಈ ಕಾರಣ ನಮ್ಮ ತಾಯಿಯನ್ನು 'ಶೇಷಿ' ಎಂಬುದಾಗಿ ಸಂಬೋಧನೆ ಮಾಡುತ್ತಿದ್ದ. ಶೇಷಮ್ಮ ಎಂಬುದು ತವರು ಮನೆಯ ನಾಮ. ಹೀಗಾಗಿ ನಮ್ಮ ತಾಯಿಯನ್ನು ಜಾತಕಕ್ಕಾಗಿ ಕೇಳಿದ. ಅದಕ್ಕೆ "ಜಾತಕವಿಲ್ಲ - ಆದರೆ ಹುಟ್ಟಿದ ದಿನ, ವೇಳೆ ಎಲ್ಲ ಗೊತ್ತಿದೆ" ಅಂತ ಅದನ್ನು ಹೇಳಿದಳು. ಅಷ್ಟು ವಿಷಯ

ತಿಳಿದು ಜಾತಕ ಬರೆಸಿ "ಕನ್ಯಾ-ವರರ ಜಾತಕ ಬಹಳ ಚೆನ್ನಾಗಿ ಸೇರುತ್ತೆ" ಅಂತ ಹೇಳಿಬಿಟ್ಟ. ನಮ್ಮ ತಾಯಿಯ ಸ್ವಭಾವ ಎಲ್ಲರನ್ನೂ ನಂಬುವುದು. ಹೀಗಾಗಿ ಆ ಕನ್ಯೆಯನ್ನು ಒಪ್ಪಿದಳು.

ಈ ವೇಳೆಗೆ ದೇವನೂರಿನಲ್ಲಿದ್ದ ನಮ್ಮ ದೊಡ್ಡಪ್ಪನಿಗೆ ಬಹಳ ಖಾಯಿಲೆ ಎಂದು ತಂತಿ ವರ್ತಮಾನ ಬಂತು. ನಾನು ಕೂಡಲೇ ಅಲ್ಲಿಗೆ ತೆರಳಿದೆ. ನಾನು ಹೋದ ಮಾರನೇ ದಿವಸವೇ ಅವರು ತೀರಿಕೊಂಡರು. ಆ ಊರಲ್ಲಿ ಬ್ರಾಹ್ಮಣರೇ ಕಡಿಮೆ. ಅದರಲ್ಲೂ ಶವವಾಹಕರೇ ಇಲ್ಲ. ಹೀಗಾಗಿ ಏಕಪುತ್ರನಾದ ಅಪ್ಪೂರಾಯ ಒಂದು ಕಡೆ - ಹಿಂದೆ ನಾನು. ಹೀಗೆ ಶವವಾಹಕರಾಗಿ ದಹನ ಸಂಸ್ಕಾರಗಳನ್ನು ಪೂರೈಸಿ ಮನೆಗೆ ಬಂದೆವು. ನಾನು ಸ್ಕೂಲಿಗೆ ಬರಬೇಕಾಗಿದ್ದದ್ದರಿಂದ ಮೂರು ದಿನವಿದ್ದು ಬೆಂಗಳೂರಿಗೆ ವಾಪಸು ಬಂದು ಬಿಟ್ಟೆ. ಹನ್ನೊಂದು ದಿನಗಳ ನಂತರ ಮಂಗಳಸ್ನಾನವೂ ಆಯಿತು.

ಪ್ರವಾಸಕ್ಕೆ ಹೊರಟೆವು. ವಾಣಿಯರಬಾಂಡಿ ಎಂಬಲ್ಲಿಗೆ ಹೋಗಿ ಅಲ್ಲಿ __________ __________ ಇತ್ಯಾದಿಗಳನ್ನು ನಡೆಸಿ ಎಲ್ಲರ ಜೊತೆಯಲ್ಲಿ ಶ್ರೀರಂಗಕ್ಕೆ ಸೇರಿದೆವು. ಅಲ್ಲಿಗೆ ನಮ್ಮ ಪ್ರವಾಸ ತೀರಿತು. ಆದರೆ ನಾನು ಮತ್ತು ನರಸಿಂಹಯ್ಯ ಎಂಬುವರು ರಾಮೇಶ್ವರಕ್ಕೆ ಹೋಗಿ ಕ್ಷೇತ್ರದರ್ಶನ, ಪಿತೃ ಕಾರ್ಯಗಳ ಮಾಡಿ ಬಂದೆವು. ಸೇತು ಸ್ನಾನವೂ ಆಯಿತು.

ಈ ವೇಳೆಗೆ ಹಲ್ಲುಗಳು ಹುಳುಕಾಗಿ ಆರೋಗ್ಯ ಕೆಟ್ಟಿತ್ತು. ಕಣ್ಣಿನ ಡಾಕ್ಟರು ಶ್ರೀ B K ನಾರಾಯಣರಾಯರಿಗೆ ತೋರಿಸಲಾಗಿ "ಹುಳುಕು ಹಲ್ಲಿನಿಂದ ಆಹಾರವೆಲ್ಲ ವಿಷವಾಗುತ್ತಿದೆ. ಮೊದಲು ಅವನ್ನು ಕೀಳಿಸಿ" ಅಂದರು. ಹಲ್ಲುನೋವು ಸಹಿಸೋದು ಬಲು ಕಷ್ಟವಾಗಿತ್ತು. ಅದಕ್ಕಾಗಿ ಕಂಟೋನ್ಮೆಂಟಿಗೆ ಹೋಗಿ ಹಲ್ಲುಗಳನ್ನು ತೆಗೆಸಿದೆ - ದಿನಕ್ಕೆ ಒಂದು ಸಾಲಿನಂತೆ (ಮೊದಲ ದಿನ 14 ಹಲ್ಲುಗಳು. ಎರಡನೇ ದಿನ 14 ಹಲ್ಲುಗಳು). ಒಂದು ವಾರದವರೆಗೂ ಹಾಸಿಗೆಯಲ್ಲಿ ರಕ್ತ. ತಾಯಿಯವರು ಬೈಯ್ಯುತ್ತಾರೆಂದು ಅವರಿಗೆ ಹೇಳದೇನೆ ಆ ಕೆಲಸ ಮಾಡಿಬಿಟ್ಟೆ. ದೇವರ ದಯದಿಂದ ಅನುಕೂಲವಾಯಿತು. ಹೊಸ ಹಲ್ಲುಗಳನ್ನು ಕಟ್ಟಿಸಿಕೊಂಡೆ. ಆರೋಗ್ಯ ಉತ್ತಮವಾಯಿತು.

ಪುನಃ ಮೈಸೂರಿನಿಂದ ರಾಮರಾಯರು ಬಂದು "ಶೇಷಿ, ಲಗ್ನ ಇಡಿಸಿದ್ದೇನೆ, ನೀವುಗಳು ಹೊರಡಲು ಸಿದ್ಧರಾಗಿ" ಎಂದರು. ಆ ಲಗ್ನದ ದಿವಸ ನಮ್ಮ ದೊಡ್ಡಪ್ಪನವರ ವೈಕುಂಠ ಸಮಾರಾಧನೆ ದಿನ. ಇದಕ್ಕಾಗಿ

ಹಿಂದೇಟು ಹಾಕಿದರೂ - ರಾಮರಾಯರು. ಆಚಾರ್ಯರನ್ನ, ಜ್ಯೋತಿಷ್ಯರನ್ನ ವಿಚಾರಿಸಿದ್ದೇನೆ, ಆಗಬಹುದು ಅಂತ ಒತ್ತಾಯ ಮಾಡಿ ಅದೇ ಲಗ್ನಕ್ಕೆ ಒಪ್ಪಿಸಿದರು. ಇಷ್ಟು ಒತ್ತಾಯಕ್ಕೆ ಕಾರಣ - ಶ್ರೀ ಯಾದವಮೂರ್ತಿರಾಯರ ಭಾವಮೈದುನಂದಿರಾದ ಶ್ರೀ ಬಾಪು ಸುಬ್ಬರಾಯರೆಂಬುವರು ತಮ್ಮ ಮಗಳ ಲಗ್ನವನ್ನು ಅದೇ ದಿನ ಇಡಿಸಿದ್ದರು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಅದೇ ಲಗ್ನಕ್ಕೆ, ಅದೇ ಲಗ್ನ ಮಂಟಪದಲ್ಲಿ ಎರಡು ಲಗ್ನಗಳೂ ಜರುಗಬೇಕಿತ್ತು. ಸರಿ, ನಾನು ಕೂಡಲೇ ಮಲ್ಲೇಶ್ವರಕ್ಕೆ ಹೋಗಿ ಅಲ್ಲಿದ್ದ ನಮ್ಮ ದೊಡ್ಡಪ್ಪ ರಾಘವೇಂದ್ರರಾಯರನ್ನು ಕಂಡು ಇದ್ದ ಸಂಗತಿ ತಿಳಿಸಿದೆ. ಅವರು ಸಹ ಲಗ್ನಕ್ಕೆ ಒಪ್ಪಿಗೆ ಕೊಟ್ಟರು. ಹೀಗಾಗಿ ಮೈಸೂರಿಗೆ ಹೊರಟೆವು.

ಜೊತೆಯಲ್ಲಿ ಒಬ್ಬ ಕಳಸಗಿತ್ತಿ ಬೇಕಷ್ಟೆ? ಆಗ ಶ್ರೀಮತಿ ಗಂಗಾಬಾಯಿಯ ಅಕ್ಕನ ಮೊಮ್ಮಗಳು ಅಲ್ಲಿಗೆ ಬಂದಿದ್ದಳು. ಆ ಹುಡುಗಿಯನ್ನು ಕರೆದುಕೊಂಡು ಹೊರಟೆವು. ಸರಿ. ಲಗ್ನವೇನೋ ಆಯಿತು. ಆದರೆ ನಮ್ಮ ತಾಯಿಗೆ ಹೆಚ್ಚು ಸಂತೋಷಕ್ಕೆ ಕಾರಣವಾಗಿಲ್ಲ. ಅವಳಿಗೆ ನಾನು ಜರತಾರಿ ಪಂಚೆ ಉಡಬೇಕು ಎಂಬ ಆಕಾಂಕ್ಷೆ. ಅದು ಲಗ್ನಕಾಲದಲ್ಲಿ ಬರುತ್ತೆ ಎಂದು ಇದ್ದಳು. ಅದು ನಡೆಯಲಿಲ್ಲ. ಇಷ್ಟೇ ಅಲ್ಲದೆ - ಕಾಲಾವಕಾಶವಿಲ್ಲದೆ ಮದುವೆ 'ಸೂಟು' ಎಂಬುದು ಸರಿ ಹೋಗಲಿಲ್ಲ. ಅಳತೆ ಇಲ್ಲದೆ ಹೊಲಿಸಿದ್ದು ಹೇಗೆ ಸರಿಯಾದೀತು? ಹೀಗಾಗಿ ಅಸಮರ್ಪಕವಾಯಿತು. ಶ್ರೀ ಹರಿ ಇಚ್ಛೆ.

ಲಗ್ನವಾಗಿ ಬೆಂಗಳೂರಿಗೆ ಬಂದೆವು. ಹುಡುಗಿ ಋತುಮತಿಯಾಗಿದ್ದಿಲ್ಲ. ಇನ್ನೂ 12 ನೇ ವಯಸ್ಸು. ನನಗೆ 22 ನೇ ವಯಸ್ಸು. ನನ್ನ ಓದು ಸಾಗುತ್ತಿತ್ತು. ಮೊದಲ ವರ್ಷ ಪರೀಕ್ಷೆಯಲ್ಲಿ ತೇರ್ಗಡೆಯಾಯಿತು. ಆದರೆ ಕೆಲಸವಾಗಲು ಆರು ತಿಂಗಳು ಕಾಯಬೇಕಾಯಿತು. ಕೊನೆಗೆ ಕೆಲಸಕ್ಕೆ ಆರ್ಡರು ಬಂದು ಕನ್ನಂಬಾಡಿಕಟ್ಟೆಗೆ ಹಾಕಿದರು.

ಇನ್ನೇನು ನಮ್ಮ ತಾಯಿಯ ಸಂತೋಷಕ್ಕೆ ಪಾರವೇ ಇಲ್ಲ. ಸದ್ಯದಲ್ಲೇ ಸ್ವತಂತ್ರ ಜೀವನ ನಡೆಯುತ್ತೆಂಬ ಆನಂದ. ಹೊರಡಬೇಕಾದರೆ ಶ್ರೀಮತಿ ಗಂಗಾಬಾಯಿಯು ಪಾತ್ರೆಗಳನ್ನೂ, ಒಂದು 'ಪ್ರೈಮಸ್ ಸ್ಟೋವ್' ಅನ್ನೂ ಒದಗಿಸಿ ಆಶೀರ್ವಾದ ಮಾಡಿ ಕಳುಹಿಸಿ ಕೊಟ್ಟರು.

ಬೆಂಗಳೂರಿಂದ ಹೊರಟು ಕೃಷ್ಣರಾಜ ಸಾಗರಕ್ಕೆ ಸೇರಿ 1916 ನೇ ಡಿಸೆಂಬರ್ 6 ನೇ ತಾರೀಖು ಕೆಲಸಕ್ಕೆ ಹಾಜರು ರಿಪೋರ್ಟು ಕೊಟ್ಟೆನು. 3 ತಿಂಗಳ ಕಾಲ ಒಂದು ಜಿಂಕ್ ಷೀಟಿನ ಮನೆಯಲ್ಲಿ ಕಾಲ

ಕಳೆಯ ಬೇಕಾಯಿತು. ನನ್ನ ಜೊತೆಯಲ್ಲಿ ಸ್ನೇಹಿತರು ನರಸಿಂಹಯ್ಯ ಮತ್ತು ಕೃಷ್ಣಯ್ಯಂಗಾರ್ ಎಂಬಿಬ್ಬರು ಇದ್ದರು. ಎಲ್ಲರೂ ಒಟ್ಟಿಗೇ ಸೇರಿದೆವು. ಎಲ್ಲರೂ ಒಂದೇ ಕಡೆ ವಾಸ ಮಾಡಿದೆವು. ನಮಗೆ ಅಡಿಗೆ ಮಾಡಲು ಬರದು. ಒಂದು ಗಡಿಗೆಯಲ್ಲಿ ಉಪ್ಪಿಟ್ಟು ಮಾಡುತ್ತಿದ್ದೆವು.

ಮನೆ ಸಿಕ್ಕ ಮೇಲೆ ಬೆಂಗಳೂರಿಗೆ ಬಂದು ನಮ್ಮ ತಾಯಿಯವರನ್ನು ಕರೆದುಕೊಂಡು ಸಂಸಾರವನ್ನು ಹೂಡಿದ್ದಾಯಿತು. ನಮ್ಮ ಮಾತೋಶ್ರೀಯರಿಗೆ ಆನಂದವೇ ಆನಂದ. ಇಷ್ಟು ಹೊತ್ತಿಗೆ ನನ್ನ ಪತ್ನಿ ಋತುಮತಿಯಾದ ಪತ್ರ ಬಂತು. ಆದರೆ ಕ್ಷಿಪ್ರದಲ್ಲಿ ಅವಳು ಸನ್ನಿವಾತ ಜ್ವರಕ್ಕೆ ಈಡಾಗಿ ಮಲಗಿದಳು. ಅದರಿಂದ ಪಾರಾಗಿ ಸರಿಯಾದ ಆರೋಗ್ಯ ಸ್ಥಿತಿಗೆ ಬರಬೇಕಾದರೆ ಒಂದು ವರ್ಷವಾಯಿತು. ಅನಂತರ ನಿಷೇಕವಾಗಿ ಪತ್ನಿಯನ್ನು ಮನೆಗೆ ಕರೆತಂದಾಯಿತು.

1917 ರಿಂದ 1921 ಪೂರ್ತ ಕೃಷ್ಣರಾಜಸಾಗರದಲ್ಲಿಯೇ ಉದ್ಯೋಗ. ಅಲ್ಲಿ ನಡೆದ ಘಟನೆಗಳೆಂದರೆ - ನಮ್ಮ ತಾಯಿಯವರು 'ಅಖಂಡ' ಮಾಸೋಪವಾಸ, ಪಕ್ಷೋಪವಾಸ ಇತ್ಯಾದಿ ಮಾಡುತ್ತಿದ್ದರು. ಅವುಗಳ ಉದ್ಯಾಪನಾ ಮಹೋತ್ಸವಗಳು ಜರುಗಿದವು. ಮನೆಯಲ್ಲಿ ನಾವು 3 ಮಂದಿ ಅಲ್ಲದೆ, ನಮ್ಮ ತಾಯಿಯ ಚಿಕ್ಕಮ್ಮ - ಅಂದರೆ ನಮ್ಮ ಅಜ್ಜನ ಎರಡನೇ ಹೆಂಡತಿ - ಇದ್ದರು. ಆಕೆಯು ಮಡಿ ಹೆಂಗಸು. ಬರುವ ಸಂಬಳ ಸಾಕಾಗದೆ ಪ್ರತಿಯೊಂದು ಉದ್ಯಾಪನೆಯೂ ಸಾಲ ಮಾಡಿ ಜರುಗುತ್ತಿತ್ತು. ಇನ್ನೊಂದು ವಿಶೇಷ. ಪ್ರತಿ ವರ್ಷ ಮಳೆಗಾಲದಲ್ಲಿ ಕನ್ನಂಬಾಡಿಕಟ್ಟೆಯನ್ನು ನೋಡಲೋಸುಗ ಅನೇಕ ಊರುಗಳಿಂದ ಬಂಧು ಮಿತ್ರರು ಬರುತ್ತಿದ್ದರು. ಮತ್ತೆ ಶನಿವಾರ, ಭಾನುವಾರಗಳ ರಜಾದಿನಗಳಲ್ಲಿ ಮೈಸೂರಿನಿಂದ ಸ್ನೇಹಿತರು, ಬಾಂಧವರು ಬರುತ್ತಿದ್ದರು. ಅತಿಥಿ ಸತ್ಕಾರವೆಂದರೆ ನಮ್ಮ ಮಾತೋಶ್ರೀಯವರಿಗೆ ಬಹು ಪ್ರೇಮ. ಆಗಿನ ಕಾಲ ಸೇರು ಹಾಲಿಗೆ ಎರಡು ಆಣೆ ಮಾತ್ರ. ಬಂದ ಅತಿಥಿಗಳಿಗೆ ತಪ್ಪದೆ ಹಾಲು, ಖೀರು ಮಾಡಿ ಬಡಿಸುತ್ತಿದ್ದಳು. ಹೀಗೆ ಅಲ್ಲಿರುವ ಪರ್ಯಂತವೂ ನಡೆಯಿತು.

1919 ರಲ್ಲಿ ಪತ್ನಿಯು ಗರ್ಭವತಿಯಾಗಿ ಕಾಲಕಾಲಕ್ಕೆ ಜರುಗಬೇಕಾದ ಸಂಸ್ಕಾರಗಳು ಜರುಗಿ 2-1-1920 ರಲ್ಲಿ ಅವರ ತವರು ಮನೆಯಲ್ಲಿ ಒಂದು ಪುತ್ರಿಕಾ ರತ್ನವನ್ನು ಪಡೆದಳು. ಅದಕ್ಕೆ ಪದ್ಮಾವತಿ ಎಂದು ನಾಮಕರಣವಾಯಿತು. ಪುನಹ ತಾ 29-8-1921 ರಲ್ಲಿ ದ್ವಿತೀಯ ಪುತ್ರಿಯ ಜನನ.

ಆ ಸನ್ನಿವೇಶದಲ್ಲಿ ನಾನು ಮಲೇರಿಯಾ ಜ್ವರದಿಂದ ಪೀಡಿತನಾಗಿ ಬಹಳ ಅನಾರೋಗ್ಯ ಕಂಡು ಬಂತು. ಅಲ್ಲಿಯ medical officer ರವರು ಪರೀಕ್ಷೆ ಮಾಡಿ ಕೂಡಲೇ ವರ್ಗಾಯಿಸದಿದ್ದರೆ ಪ್ರಾಣಾಪಾಯವೆಂತ ಬರೆದು ಕೊಟ್ಟರು. ಆ ಆಧಾರದ ಮೇಲೆ ಅರ್ಜಿ ಗುಜರಾಯಿಸಿಕೊಳ್ಳಲು ಕೋಲಾರಕ್ಕೆ ವರ್ಗವಾಯಿತು.

ನನಗೆ ಕಾಸ ಅಥವಾ ಉಬ್ಬಸದ ರೋಗ ಬಲು ಕಾಡುತ್ತಿತ್ತು. ಕೋಲಾರದಲ್ಲಿ ಪ್ರಖ್ಯಾತ ಆಯುರ್ವೇದ ವೈದ್ಯನೊಬ್ಬ 'ಮುಚುಕುಂದಪ್ಪ ' ಎಂಬುವನಿದ್ದನು. ಅವನು ಹಳೇಕಾಲದ ಕುಪ್ಪೆಮಾತ್ರೆಗಳನ್ನಿಟ್ಟುಕೊಂಡು ಅನುಪಾತ ಬದಲಾಯಿಸಿ ಅನೇಕ ರೋಗಗಳಿಗೆ ಚಿಕಿತ್ಸಕನಾಗಿದ್ದನು. ನಾಡಿ ನೋಡೋದರಲ್ಲಿಯೂ, ರೋಗವನ್ನು ಕಂಡುಹಿಡಿಯುವುದರಲ್ಲಿಯೂ ನಿಪುಣ. ಸರಿ, ನನಗೆ ಬಂಗಾರದ ಭಸ್ಮ ಕೊಡಲು ಪ್ರಾರಂಭ. ಅದಕ್ಕೆ ಪಥ್ಯವೇ ಸಾರು ಮತ್ತು ಹೇರಳವಾಗಿ ತುಪ್ಪ. ಹೀಗೆ ಎರಡು ತಿಂಗಳ ಕಾಲ ನಡೆಯಿತು. ಅಲ್ಲಿಗೆ ಒಂದು ಡಬ್ಬಿ ತುಪ್ಪ ಜೀರ್ಣಿಸಿಕೊಂಡಿದ್ದೆ.

ಕೋಲಾರದಲ್ಲಿ ಇದ್ದದ್ದು ಆರು ತಿಂಗಳು ಮಾತ್ರ. ಅಲ್ಲಿ ಇನ್ನೊಂದು ಘಟನೆ ಎಂದರೆ ಕೃಷ್ಣರಾಜಸಾಗರದಲ್ಲಿ Cycle Allowance ಇತ್ತು. ಅದನ್ನು Horse allowance ಆಗಿ ಪರಿವರ್ತಿಸಬೇಕಾಗಿತ್ತು. ಅದರಿಂದ ಇನ್ನೂ ಏಳೂವರೆ ರೂಪಾಯಿ ಅಲೋಯನ್ಸು ಜಾಸ್ತಿಯಾಗುವುದೆಂಬ ಆಶೆ. ಅರ್ಜಿ ಹಾಕಿಕೊಂಡೆ. ಎಗ್ಸಿಕ್ಯುಟಿವ್ ಇಂಜಿನಿಯರ್ ಶ್ರೀ R . ಪುಟ್ಟಸ್ವಾಮಯ್ಯ ಎಂಬುವರು. ಕುದುರೆಯನ್ನು ತರಲು ಹೇಳಿದರು. ಸರಿ, ಯಾರದೋ ಒಬ್ಬ ಸ್ನೇಹಿತರ ಕುದುರೆ ಮತ್ತು ಅವರ ಆಳನ್ನೇ ಎರವಲು ತೆಗೆದುಕೊಂಡು ಆಫೀಸಿನ ಕಾಂಪೌಂಡಿನಲ್ಲಿ ಕಟ್ಟಿದೆ. ಇಂಜಿನೀಯರು ನೋಡಿ ಮಾರನೇ ದಿನ ರಸ್ತೆ ಮೇಲೆ ಬರುವಂತೆ ಆಜ್ಞೆಯಾಯಿತು. ಅದೃಷ್ಟವಶಾತ್ ಕುದುರೆ ಸವಾರಿ ಅಭ್ಯಾಸ ಮಾಡಿದ್ದೆ. ಆದ್ದರಿಂದ ತೊಂದರೆ ಆಗಲಿಲ್ಲ. ಸಾಹೇಬರ ಕಾರಿನ ಹಿಂದೆ ಸ್ವಲ್ಪ ದೂರ ಸವಾರಿ ಮಾಡಿಕೊಂಡು ಹೋದೆ. ಅದನ್ನು ನೋಡಿ ಕುದುರೆ ಅಲೋಯನ್ಸು ಮಂಜೂರಾಯಿತು. ಅಂದಿನಿಂದ ರಿಟೈರ್ ಆಗುವವರೆಗೂ ಆ ರೀತಿ ಅಲೋಯನ್ಸು ಬರುತ್ತಿತ್ತು.

1922 ರಲ್ಲಿ ಕೋಲಾರದಿಂದ ಚಿಕ್ಕಬಳ್ಳಾಪುರಕ್ಕೆ ವರ್ಗವಾಯಿತು. ಅಲ್ಲಿ ಊರೊಳಗೆ ಒಂದು ಮುಖ್ಯಪ್ರಾಣನ ಗುಡಿ. ಅದರ ಬಳಿ ಅಚ್ಯುತಪ್ಪನವರ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ವಾಸ.

ಬಾಡಿಗೆ 4 ರೂ. ಮಾತ್ರ. ಅಲ್ಲಿ 'ಉರವಣಿ ನರಸಿಂಹಾಚಾರ್ಯ' ಎಂಬುವರೂ ಸಹ ಅಲ್ಲೇ ಒಕ್ಕಲು. ಅಲ್ಲಿಗೆ ಹೋದ ಕೆಲವೇ ತಿಂಗಳಲ್ಲಿ ಒಂದು ಘಟನೆ. ಒಬ್ಬ ವೃದ್ಧ ಬ್ರಾಹ್ಮಣ ಬಂದು ತನ್ನ ಏಕಮಾತ್ರ ಪುತ್ರನಿಗೆ ಉಪನಯನವಾಗಬೇಕೆಂದು ಪ್ರಾರ್ಥಿಸಿದ. ನನ್ನ ಕೈ ಅಂತೂ ಬರಿಗೈ. ಹೀಗೆ ಆಲೋಚಿಸಿ ಸ್ನೇಹಿತರ ಬಳಿ ಪ್ರಸ್ತಾಪಿಸಿದೆ. ಕೆಲವರು ಸಹಾಯ ಮಾಡಿದರು. ಅನಂತರ ಪ್ರಸಿದ್ಧ ಲಾಯರಾಗಿದ್ದ ಶ್ರೀ ಸೂರ್ಯನಾರಾಯಣ ರಾಯರ ಬಳಿ ಹೋದೆ. ವಿಷಯ ತಿಳಿಸಿದೆ. ಅವರಲ್ಲಿ ಒಳ್ಳೇ ಪ್ರತಿಕ್ರಿಯೆ ಬಂದಿತು. "ಗೋವಿಂದರಾಯರೇ, ನಾನು ಹೇಗೂ ನನ್ನ ಮಗನ ಉಪನಯನ ಮಾಡುತ್ತಿದ್ದೇನೆ. ಈ ಕಾರಣ ಆ ಬ್ರಾಹ್ಮಣ ಬಂದು ಮಗನಿಗೆ ಉಪನಯನ ಮಾಡಿಕೊಂಡು ಹೋಗಲಿ" ಎಂದರು. ಸರಿ ಹಾಗೇ ಆಯಿತು. ವಿಧಿ ಚೋದಿತವೋ ಎಂಬಂತೆ ಆ ವೃದ್ಧನು ಜಾಗ್ರತೆ ತೀರಿಕೊಂಡ. ತಾಯಿ ಮತ್ತು ಮಗ ಉಳಿದರು. ಉಪನಯನವಾದದ್ದರಿಂದ ತಂದೆಯ ಶ್ರಾದ್ಧ ಕರ್ಮಾದಿಗಳನ್ನು ಮಾಡಲು ಬಹು ಉಪಕಾರಕವಾಯಿತು.

ಇನ್ನೊಂದು ಘಟನೆ. 1923 ರಲ್ಲಿ. ಸುಗ್ಗಿ ಕಾಲದಲ್ಲಿ ಶ್ರೀರಂಗಪಟ್ಟಣಕ್ಕೆ ಹೋಗಿ ಬತ್ತವನ್ನು ತರಬೇಕಾಗಿತ್ತು. ಆ ಸನ್ನಿವೇಶದಲ್ಲಿ ಚಿಕ್ಕಬಳ್ಳಾಪುರದಲ್ಲಿ ಪ್ಲೇಗ್ ಸೋಂಕಿನಿಂದ ಇಲಿಗಳು ಸಾಯುತ್ತಿದ್ದವು. ಊರಿನಲ್ಲಿ ಎಲ್ಲ ಕಡೆಯೂ ಪ್ಲೇಗಿನ ಚುಚ್ಚುಮದ್ದು ಹಾಕಲು ಪ್ರಾರಂಭ. ನಮ್ಮ ಮನೆಯಲ್ಲಿ ಎಲ್ಲರಿಗೂ ಮಾಡಿಸಿದೆ. ನಾನು ಮಾತ್ರ ಧೋರಣೆಯಿಂದ ಮಾಡಿಸಿಕೊಳ್ಳಲಿಲ್ಲ. ಸರಿ, ಬೆಂಗಳೂರಿಗೆ ಹೊರಟೆ. ಅಲ್ಲಿ ಮಲ್ಲೇಶ್ವರದಲ್ಲಿದ್ದ ದೊಡ್ಡಪ್ಪನ ಮನೆಗೆ ಹೋದೆ. ವರ್ತಮಾನ ಪತ್ರಿಕೆಯಲ್ಲಿ ನೋಡಿದೆ. ಅವರು  "ಗೋವಿಂದಾ ನೀನು ರೂಮಿನಲ್ಲಿ ಅಲಾಯಿದಾ ಮಲಗು" ಅಂದರು. ಹಾಗೆಯೇ ಮಾಡಿ ಮಾರನೇ ದಿನ ಮೈಸೂರಿಗೆ ಹೊರಟು ಅಲ್ಲಿಂದ ನಗೂರ ಹಳ್ಳಿಗೆ ಹೋಗಿ ಬತ್ತವನ್ನು ಚಿಕ್ಕಬಳ್ಳಾಪುರಕ್ಕೆ ಸಾಗಿಸಲು ಏರ್ಪಾಟು ಮಾಡಿ ಬಂದೆ. ಊರಿಗೆ ಬರುವ ವೇಳೆಗೆ ಏನೋ ಆಯಾಸ, ಜ್ವರ ಬಂದಂತೆ ಆಗಿತ್ತು. ರೈಲು ಇಳಿದ ಕೂಡಲೇ ಆಸ್ಪತ್ರೆಗೆ ಹೋಗಿ, ಬಲಗೈ ಕಂಕುಳಲ್ಲಿ ಗಡ್ಡೆ ಆಗಿದೆ, ನೋಯುತ್ತೆ ಅಂತ ಹೇಳಿ ತೋರಿಸಿದೆ. ಡಾಕ್ಟರು ತೇವ ಟಿಂಚರ್ ಅಯೋಡಿನ್ ಸವರಿ ಕಳುಹಿಸಿದರೂ ಯಾಕೋ ನನ್ನ ಮನಸ್ಸಿಗೆ ಹಿಡಿಸಲಿಲ್ಲ . ಮನೆಗೆ ಬಂದು ಆಯುರ್ವೇದ ಪಂಡಿತರಿಗೆ ಹೇಳಿ ಕಳುಹಿಸಿದೆ. ಅವರು ಪರೀಕ್ಷೆ ಮಾಡಿ, ಇದು ಪ್ಲೇಗಿನ ಗಡ್ಡೆಯೇ ಸರಿ. ಚಿಕಿತ್ಸೆ ಮಾಡುತ್ತೇನೆಂದರು. ಗಡ್ಡೆ ಕರಗಲು ಹೊಟ್ಟೆಗೆ ಔಷಧ ಕೊಟ್ಟು ಲೋಳಿ ಸರದ ತಿರುಳನ್ನು ಕಟ್ಟುತ್ತಾ ಬಂದರು. ಜ್ವರವೂ ನಿಂತಿತು. ಗಡ್ಡೆಯೂ ಸಹ ಕರಗಿ ಹೋಗುತ್ತಾ ಬಂತು.

ಈ ಕಾಲದಲ್ಲಿ ಮತ್ತೊಂದು ಘಟನೆ. ಸಾಮಾನ್ಯವಾಗಿ ಎಲ್ಲಿದ್ದರೂ ಶ್ರೀ ರಾಯರ ಆರಾಧನೆ ಮತ್ತು ಶ್ರೀ ಮಧ್ವನವಮಿ ಉತ್ಸವ ಇವುಗಳಿಗೆ ಊರಿನ ಮಾಧ್ವರನ್ನೆಲ್ಲಾ ಒಂದು ಕಡೆ ಸೇರುವಂತೆ ಮಾಡಿ ಆರಾಧನೆ ಜರುಗಿಸುತ್ತಿದ್ದೆ. ಅಂತೆಯೇ ಶ್ರೀರಂಗಪಟ್ಟಣಕ್ಕೆ ಹೋಗುವ ಮುನ್ನವೇ ಎಲ್ಲ ಮಾಧ್ವರಲ್ಲಿ ಹೋಗಿ ಚಂದಾ ಹಣವನ್ನು ಎತ್ತಿ ಊರೊಳಗಿನ ಪ್ರಾಣದೇವರ ಗುಡಿಯಲ್ಲಿ ಶ್ರೀ ಮಧ್ವನವಮಿ ಆಚರಣೆ. ಬ್ರಾಹ್ಮಣ ಸುವಾಸಿನಿಯರಿಗೆ ಭೋಜನದ ಏರ್ಪಾಟು ಮಾಡಿದ್ದೆ. ಆದರೆ ದೈವವಶಾತ್ ನಾನು ಪ್ಲೇಗ್ ರೋಗದಿಂದ ಮಲಗಿದ್ದೆ. ಮಧ್ವ ನವಮಿ ಉತ್ಸವ ಹೊರಟಿತು. ನಾನಿರುವ ಸಂದಿಗೆ ಉತ್ಸವ ಬರುವಂತಿದ್ದಿಲ್ಲ. ತೇರು ಬರಲು ಹಾದಿ ಚಿಕ್ಕದು. ಆಗ ತೇರನ್ನು ಸಂದಿ ಬಳಿ ನಿಲ್ಲಿಸಿದರು. ನನಗೆ ವರ್ತಮಾನ ಬಂತು. ನಾನು ತೆವಳಿಕೊಂಡು ದೇವರ ದರ್ಶನ ಮಾಡಿ ಬಂದೆ. ಊರಿನ ಜನರೆಲ್ಲ ಇಂತಹ ಮಹತ್ವಾದ ಕಾರ್ಯ ಮಾಡಿದಿರಿ, ಅದರಿಂದ ವಾಸಿಯಾಯಿತು ಅಂದುಕೊಂಡರು. ಅನೇಕ ಭಕ್ತರು ಮನೆಗೆ ಬಂದು ಅವರ ಅನುಕಂಪವನ್ನು ತೋರಿಸಿಕೊಂಡರು.

೧೯೨೧ ರಲ್ಲಿ ನಮ್ಮ ಇಲಾಖೆಯಲ್ಲಿ Retrenchment ಗೆ ಪ್ರಾರಂಭವಾಗಿತ್ತು. ಅನೇಕಾನೇಕ ಮಂದಿಗಳನ್ನು ಕೆಲಸದಿಂದ ತೆಗೆದಿದ್ದರು. ನಮ್ಮವರೆಗೂ ಬಂದಿದ್ದಿಲ್ಲ. ಆದರೆ ಅದರ ಶಖೆ ಈಗ ಅಂದರೆ ೧೯೨೪ ರಲ್ಲಿ ನಮ್ಮಿಬ್ಬರಿಗೆ - ನನಗೆ ಮತ್ತು ಕೃಷ್ಣಯ್ಯಂಗಾರ್ಯರಿಗೆ - ತಟ್ಟಿತು. ಕೆಲಸ ಹೋಯಿತು. ಆಗ ನಮ್ಮ ಮಾವನವರಿಗೆ Frenchrock ಅಥವಾ ಈಗಿನ ಪಾಂಡವಪುರದಲ್ಲಿ Revenue Inspector ಕೆಲಸ. ಅಲ್ಲಿಗೆ ಹೋದೆ. ಇನ್ನೇನು ಪ್ರಾವಿಡೆಂಟ್ ಡನ್ನು ವಾಪಸು ಪಡೆದು, ಎತ್ತುಗಳನ್ನು ಕೊಂಡು ಸ್ವಂತ ಬೇಸಾಯ ಮಾಡೋಣವೆನ್ನಿಸಿತು. ಹೀಗಾಗುವುದರಲ್ಲಿ, ಅಂದರೆ ಒಂದೇ ತಿಂಗಳಲ್ಲಿ ಕೆಲಸಕ್ಕೆ ಆರ್ಡರು ಬಂದಿತು. ಆಗ ನಾಗಮಂಗಲಕ್ಕೆ Relief worksಗೆ ಹಾಕಿದರು.

(The rest of this page should get inserted into middle of last page)

ಇನ್ನೊಂದು ಘಟನೆ. ಉಬ್ಬಸ ರೋಗಕ್ಕೆ ಕೋಲಾರದಲ್ಲಿ ಚಿಕಿತ್ಸೆ ಹೊಂದಿ ಬಂದಿದ್ದೆನಷ್ಟೆ. ಒಂದು ವರ್ಷದವರೆಗೂ ಅದು ಕಾಡಲಿಲ್ಲ. ಪುನ: ಪ್ರಾರಂಭವಾಯಿತು. ಹೀಗೆ ಔಷಧಿ ತೆಗೆದುಕೊಂಡು ಹಣ ಖರ್ಚುಮಾಡಿ ಬೇಜಾರು ಆಯಿತು. ಇನ್ನು ಉಳಿದಿರೋದು ಹರಿ ಗುರುಗಳಿಗೆ ಶರಣು ಹೋಗುವುದು. ಶ್ರೀ ರಾಘವೇಂದ್ರ ಸ್ವಾಮಿಗಳಂತೂ, ಅಭೀಷ್ಟಪ್ರದರಾಗಿ ಮಂತ್ರಾಲಯದಲ್ಲಿದ್ದಾರೆ. ಅವರ ಸೇವೆಗೆ

ಹೋಗೋಣವೆನ್ನಿಸಿತು. ಆಗ ಕೈಲಿ ದ್ರವ್ಯವಿದ್ದಿಲ್ಲ. ಮನೋಧೈರ್ಯದ ಬಲವೇ ಬಲ. ಮನೆಯಲ್ಲಿ ಭತ್ತವನ್ನು ಕಣಜಕ್ಕೆ ಹಾಕಿದ್ದೆ. ವರ್ಷದ ಗ್ರಾಸ. ಅದನ್ನು ಮಾರಿದೆ. ಬಂದ ಹಣವನ್ನು ದಾರಿ ಖರ್ಚಿಗೆ ಉಪಯೋಗಿಸೋಣವೆಂತ ಆಲೋಚನೆ. ಮನೆಯವರನ್ನೆಲ್ಲ ಕರೆದುಕೊಂಡು ಮಂತ್ರಾಲಯಕ್ಕೆ ಹೊರಟೆ. ಇನ್ನೂ ಟಿಕೆಟ್ ತೆಗೆದುಕೊಂಡಿದ್ದಿಲ್ಲ. ಆಗ ಸ್ಟೇಷನ್ನಿಗೆ ಬಂದಿದ್ದೇವೆ. ಆಗಲೇ ನನ್ನ ದೊಡ್ಡ ಕೂಸಿಗೆ ದಡಾರವೆದ್ದಿತು. ಜ್ವರದ ತಾಪ – 105° ಇತ್ತು. ನಮ್ಮ ತಾಯಿ ಇದ್ದು "ಏನಪ್ಪ ಹೇಗೂ ಟಿಕೆಟ್ ತೆಗೆದಿಲ್ಲ. ನೇರ ಮನೆಗೆ ಹೊರಟು ಹೋಗೋಣ" ಎಂದರು. ಆಗ ಧೈರ್ಯ ಮಾಡಲು ದೈವಿಕ ಶಕ್ತಿ ಒದಗಿತು. ನಮ್ಮ ತಾಯಿಯನ್ನು ಕುರಿತು "ಅಮ್ಮ ನಾವು ರಾಯರನ್ನು ನಂಬಿ ಹೊರಟಿದ್ದೇವೆ. ಕಾಲು ಹಿಂತೆಗೆಯೋದು ಸರಿಯಲ್ಲ, ಅವರ ಮೇಲೆ ಭಾರ ಹಾಕಿ ಹೊರಡೋಣ" ಎಂದೆ. ಅವರು ಮಾರುತ್ತರವೀಯದೆ ಸುಮ್ಮನಾದರು. ರೈಲು ಹೊರಟಿತು. ಯಾತ್ರೆಗೆ ಹೋಗುವವರು ಉಪವಾಸ ಹೊರಡಬೇಕೆಂಬ ನಿಯಮ. ಅದಕ್ಕಾಗಿ ಉಪವಾಸ ಹೊರಟಿದ್ದೆವು. ಮಧ್ಯೆ ಯಲಹಂಕದಲ್ಲಿ ಒಂದು ಘಂಟೆ ಅವಕಾಶವಿತ್ತು. ಅಲ್ಲಿ ಇಳಿದು ಅಡಿಗೆ ಮಾಡೋಣವೆಂತ ಯೋಚಿಸಿದೆವು. ಯಲಹಂಕ ಸ್ಟೇಷನ್ನಿನಲ್ಲಿ ಇಳಿಯುವಾಗ ಇನ್ನೊಂದು ಮಗುವಿಗೂ ದಡಾರ, ಜ್ವರ ಕಾಣಿಸಿಕೊಂಡಿತು. ಸರಿ, ಮೊದಲಿನಂತೇ ನಿರ್ಧಾರ. ಕೂಡಲೆ ಅಡಿಗೆ ಯತ್ನ. ಅನ್ನ ಗೊಡಸಾರು ತಯಾರಾಯಿತು. ಎಲ್ಲರೂ ಊಟ ಮಾಡಿ ರೈಲು ಒಳಕ್ಕೆ ಸೇರಿದೆವು. ರೈಲು ಹೊರಟಿತು.

ಗುಂತಕಲ್ಲಿಗೆ ಸಂಜೆ ತಲುಪಿದೆವು. ಚಿಕ್ಕಬಳ್ಳಾಪುರದಲ್ಲಿ ತೆಂಗಿನಕಾಯಿ ಅಗ್ಗವೆಂತ ಕೆಲವು ಕಾಯಿಗಳನ್ನೂ, ಸ್ವಂತ ಅಕ್ಕಿಯನ್ನೂ ಜೊತೆಗೆ ತೆಗೆದುಕೊಂಡಿದ್ದೆವು. ನಾವು ಹೊರಡುವಾಗ ಕಾಲಾವಕಾಶವಿಲ್ಲದೆ ಲಗ್ಗೇಜು ಮಾಡಿಸಿದ್ದಿಲ್ಲ. ಸರಿ, ಇಲ್ಲಿ ತೂಕ ಮಾಡಿ excess ಛಾರ್ಜು ಮಾಡಿದ. 4 ರೂಪಾಯಿ ಕೊಟ್ಟೆ. ಅಲ್ಲಿಂದ ಬೇರೆ ರೈಲು ಹತ್ತಿ ಅಣು ಮಂಚಾಲಿಯನ್ನು ಮಾರನೇ ರಾತ್ರಿ 10:30ಕ್ಕೆ ಸೇರಿದೆವು. ಉಬ್ಬಸದ ಬಾಧೆ ಬಹಳವಾಗಿತ್ತು. ರೈಲಿನಿಂದ ಇಳಿಯಬೇಕಾದರೆ ವೃದ್ಧಳಾದ ತಾಯಿಯ ಸಹಾಯ ಬೇಕಾಯಿತು. ಎಲ್ಲರೂ ಇಳಿದು ಸಾಮಾನುಗಳೊಡನೆ ಅಲ್ಲಿರುವ ರಾಯರ ಮಠದಲ್ಲಿ ಬಿಡಾರ ಮಾಡಿದೆವು. ಮಠದಲ್ಲಿ ಬಹು ಆದರಣೆ. ಸ್ನಾನಕ್ಕೆ ಹೊರಡಬೇಕು, ನಮ್ಮ ತಾಯಿಯು ನನ್ನನ್ನು ಕೇಳಿದಳು "ಏನಪ್ಪ, ತಣ್ಣೀರು ಸ್ನಾನ ತಡಿಯುತ್ತೋ, ಈ ಕೆಮ್ಮಿರುವಾಗ?". ಅದಕ್ಕೆ ನಾನು "ರಾಯರ

ಅನುಗ್ರಹವಿರುವಾಗ ತಡಿಯದೇ ಇನ್ನೇನು, ನಾನು ಬರುತ್ತೇನೆ" ಎಂದು ಹೊರಟೆ. ಸ್ನಾನ, ಆಹ್ನೀಕವಾಯಿತು. ತೀರ್ಥ ಪ್ರಸಾದವಾಯಿತು. ಎತ್ತಿನ ಗಾಡಿ ಕಟ್ಟಿಸಿಕೊಂಡು ಮಂತ್ರಾಲಯ ಕ್ಷೇತ್ರಕ್ಕೆ ಹೊತ್ತಿರುವಾಗಲೇ ತಲುಪಿದೆವು.

ಅಲ್ಲಿ ಈಗಿನ ಹಾಗೆ ಅನುಕೂಲಗಳಿದ್ದಿಲ್ಲ. ಒಂದು ದೊಡ್ಡ ಜಿಂಕ್ ಷೀಟಿನ ಹೊದಿಕೆ, ಒಳಗೆ ಸಣ್ಣ ಸಣ್ಣ ಖೋಲಿಗಳು - ಹೀಗಿದ್ದವು. ನಮಗೆ ಒಂದು ಖೋಲಿ ಕೊಟ್ಟರು. ಮಾರನೇ ದಿನದಿಂದ ಸೇವೆಗೆ ಸಂಕಲ್ಪಿಸಿ ಸೇವಾ ಪ್ರಾರಂಭ. ಸುಡು ಬೇಸಿಗೆ ದಿನಕ್ಕೆ ಮೂರು ಸಲ ಸ್ನಾನವಾಗುತ್ತಿತ್ತು. ಊಟ ಮಾಡಬೇಕಾದರೆ ಮೈಮೇಲೆ ಒದ್ದೆ ಬಟ್ಟೆ ಹಾಕಿಕೊಂಡೇ ಊಟ. ಇಲ್ಲವಾದರೆ ಅನ್ನ ತಿನ್ನುವ ಹಾಗಿಲ್ಲ. ಆ ಬಿಸಿಲಿನ ಧಗೆಗೆ ಒಪ್ಪತ್ತು ಊಟ. ರಾತ್ರಿ ಸ್ವಲ್ಪ ಅರಳು ಅಥವಾ ಅವಲಕ್ಕಿ. ಇದೇ ದಿನಚರಿ. ನಾವು ಮೂರು ಮಂದಿಯೂ ಸೇವಾ ಮಾಡಿದೆವು. ೨೦ ದಿನಗಳು.

ಉಬ್ಬಸ ರೋಗ ಎಲ್ಲಿ ಹೋಯಿತೋ ಕಾಣೆ. ಒಂದು ನಮಸ್ಕಾರವನ್ನು ಹಾಕಲು ಕೈಲಾಗದಿದ್ದರೂ - ದಿನೇ ದಿನೇ ಶಕ್ತಿ ಬಂತು. ಕೊನೆಗೆ ದಿನಕ್ಕೆ ೨೦ - ೩೦ ನಮಸ್ಕಾರ ಹಾಕುತ್ತಿದ್ದೆ. ಇಷ್ಟರಲ್ಲಿ ನನ್ನ ಎರಡು ಹೆಣ್ಣುಮಕ್ಕಳಿಗೂ ದಡಾರವು ಒಣಗಿ ಜ್ವರ ನಿಂತು ಆರೋಗ್ಯವಂತರಾದರು. ಕೊನೆಯ ಹಿಂದಿನ ದಿನ ನಮ್ಮ ತಾಯಿಗೆ ಶುಭ ಸ್ವಪ್ನವಾಯಿತು. ಅದನ್ನ ಅಲ್ಲಿ ಅರ್ಚಕರಿಗೆ ತಿಳಿಸಲು ನಿಮಗೆ ಸುಪುತ್ರ ಲಾಭವಾಗುತ್ತೆ ಮತ್ತು ಪುನಃ ದರ್ಶನಕ್ಕೆ ಬರುತ್ತೀರಿ ಎಂದು ನುಡಿದರು. ಇದು ನಮ್ಮ ತಾಯಿಯವರ ಅಪೇಕ್ಷಾ ಯಾಕೆಂದರೆ ಒಂದಾಗುತ್ತಲು ಒಂದು ಹೆಣ್ಣಾಯಿತು. ಗಂಡು ಮಗು ಆಗಲಂತ ಅವರ ಹರಕೆ. ನನ್ನ ಹಾರೈಕೆ ಉಬ್ಬಸದ ರೋಗ ನಿವಾರಣೆಗೆ. ಅಂತೂ ಎರಡೂ ಕೈಗೂಡಿತು. ಆಗ ನಿವಾರಣೆಯಾದ, ಅಂದರೆ ೧೯೨೩ರಲ್ಲಿ ನಿವಾರಣೆಯಾದದ್ದು ೧೯೭೬ರವರೆಗೂ ತಲೆ ಹಾಕಿದ್ದಿಲ್ಲ. ಈಚೆಗೆ ಯಾಕೋ ಸ್ವಲ್ಪ ಬಾಧೆ ಕೊಡುತ್ತಾ ಇದೆ. ಆದರೆ ರಾಯರ ದಯದಿಂದ ಹೆಚ್ಚು ತೊಂದರೆ ಕೊಡುತ್ತಿಲ್ಲ. ಸರಿ, ಚಿಕ್ಕಬಳ್ಳಾಪುರಕ್ಕೆ ವಾಪಸು ಬಂದೆವು.

ಅಲ್ಲಿಂದ ೧೯೨೪ರಲ್ಲಿ ನಾಗಮಂಗಲಕ್ಕೆ ವರ್ಗವಾಯಿತು. ಈ ಸಂಧರ್ಭದಲ್ಲಿ ನಮ್ಮ ತಾಯಿಯವರು "ಹಗಲೆಲ್ಲ ವರ್ಗ ಅನ್ನುತ್ತೀಯೆ, ಯಾರನ್ನಾದರೂ ನೋಡಿ ಕೇಳೀಕೋಬೇಡವೇ" ಅಂತ

ಹೇಳಿದರು. ಅದಕ್ಕೆ ನಾನು "ಅಮ್ಮಾ - ಸರ್ಕಾರದವರು ಪ್ರಯಾಣದ ಖರ್ಚನ್ನು ಕೊಡುತ್ತಾರೆ. ನಾವು ಹೋದಕಡೆ - ಒಳ್ಳೊಳ್ಳೆ ಕ್ಷೇತ್ರ. ಅಲ್ಲಿ ಭಗವನ್ಮೂರ್ತಿ ದರ್ಶನಕ್ಕೆ ಅವಕಾಶವಾಗುತ್ತೆ, ಆಗಲಿ" ಎಂದು ಸಮಾಧಾನ ಹೇಳಿದೆನು.

ನಾಗಮಂಗಲಕ್ಕೆ ಬರಬೇಕಾದರೆ ಪತ್ನಿ ಗರ್ಭವತಿ. ೯-೨-೧೯೨೪ ರಲ್ಲಿ ಒಂದು ಪುತ್ರರತ್ನಕ್ಕೆ ತಾಯಿಯಾದಳು. ರಾಯರ ಅನುಗ್ರಹವೆಂದು ಕೂಸಿಗೆ 'ಗುರುರಾಜ' ಎಂತಲೇ ನಾಮಕರಣ. ನಮ್ಮ ತಾಯಿಯ ಆನಂದಕ್ಕೆ ಪಾರವೇ ಇಲ್ಲ. ನಾಮಕರಣ ಮಹೋತ್ಸವ ಬಹು ಸಂಭ್ರಮದಿಂದ ಜರುಗಿತು.

ಇಲ್ಲಿ ಒಂದು ಘಟನೆ. ಪೊಲೀಸ್ ಇಲಾಖೆಯಲ್ಲಿ ರಿಟೈರು ಆಗಿದ್ದ ಶ್ರೀ ರಾಮಣ್ಣನವರು ಎಂಬ ಸದ್ಗೃಹಸ್ಥರು, ಸಾತ್ವಿಕ ಸ್ವಭಾವದವರು. ಆಗಾಗ್ಗೆ ನಮ್ಮ ಮನೆಗೆ ಊಟ ಉಪಚಾರಕ್ಕೆ ಕರೆಯುತ್ತಿದ್ದೆ. ಅವರಿಗೆ ಏನು ತೋಚಿತೋ ಏನೋ - ತಮ್ಮ ಮನೆಯಲ್ಲಿದ್ದ ಸರ್ವಮೂಲ ಗ್ರಂಥವೆಲ್ಲವನ್ನೂ ತಂದು ನನಗೆ ದಕ್ಷಿಣೆ ಸಹಿತ ದಾನವಾಗಿ ಕೊಟ್ಟರು. ನಾನು ಹೇಳಿದೆ "ರಾಮಣ್ಣನವರೇ ನನಗೆ ಸಂಸ್ಕೃತ ಬಾರದು. ಹೀಗಿರುವಾಗ ಸರ್ವಮೂಲ ಗ್ರಂಥ ಓದುವ ಅಧಿಕಾರವೆಲ್ಲಿ ಬರುತ್ತೆ? ಇನ್ಯಾರಿಗಾದರೂ ಕೊಡಿ" ಅಂದೆ. ಅದಕ್ಕೆ ಅವರು "ಈಗಿಲ್ಲದಿದ್ದರೂ ನಿಮಗೆ ಅಧಿಕಾರ ಮುಂದೆ ಬರುತ್ತೆ. ಅದಕ್ಕಾಗಿಯೇ ನಿಮಗೆ ಕೊಟ್ಟಿರುತ್ತೇನೆ" ಎಂದರು. 'ವಿಪ್ರ ವಾಕ್ಯೋ ಜನಾರ್ದನಃ' ಎಂಬಂತೆ ಅವರ ಮಾತು ಸತ್ಯವಾಯಿತು.

೧೯೨೫ ರಲ್ಲಿ ನಾಗಮಂಗಲದಿಂದ ಮುಳ್ಳೂರು (ನಂಜನಗೂಡು ತಾಲೂಕು) ಎಂಬಲ್ಲಿಗೆ ವರ್ಗವಾಯಿತು. ಇದು ಮಲೆನಾಡಂತಿತ್ತು. ಅಲ್ಲಿ ಬ್ರಾಹ್ಮಣರ ಮನೆ ಅಂದರೆ ಒಬ್ಬ ಸ್ಮಾರ್ತರ ಮನೆ ಮಾತ್ರ. ವೈಷ್ಣವರಿಲ್ಲ. ಕೇವಲ ಮಾರ್ಕಟ ಎಂಬ ಪಂಗಡದವರು ಬಹಳ. ಎತ್ತಿನ ಗಾಡಿಯಲ್ಲಿ ಸಾಮಾನು ಹಾಕಿಕೊಂಡು ಬರುತ್ತಿದ್ದೆವು. ಸಾಮಾನಿನ ಜೊತೆ - ಅರೆಯುವ ದೊಡ್ಡ ಕಲ್ಲು ಹಾರೆಯೂ ಇತ್ತು. ದಾರಿ ಸಮವಿಲ್ಲದೆ ಹಳ್ಳ ಕೊಳ್ಳಗಳಿತ್ತು. ಒಂದು ಕಡೆ ಗಾಡಿ ಉರುಳಿತು. ಮಕ್ಕಳು ಮರಿಗಳಿಗೇನಾಯಿತೋ ಅಂತ ಗಾಬರಿ. ಆದರೆ ದೈವಸಂಕಲ್ಪದಿಂದ ಯಾರಿಗೂ ಅಪಘಾತವಾಗದೆ ಸುರಕ್ಷಿತವಾಗಿದ್ದರು. ಸರಿಪಡಿಸಿಕೊಂಡು ಮುಳ್ಳೂರನ್ನು ಸೇರಿದೆವು.

ಇಲ್ಲಿ ಒಂದು ವಿಚಿತ್ರ ಸನ್ನಿವೇಶ. ವಾಸಕ್ಕೆ ಮನೆಗಳಿಲ್ಲ. ಸಂಸಾರ ಸಮೇತ ಬಂದಿರುತ್ತೇನೆ. ಅಲ್ಲಿದ್ದ ಕಂಟ್ರಾಕ್ಟುದಾರನಿಗೆ ಕೇಳಿದೆ. ಅದಕ್ಕೆ ಆತನು ಈ ರೀತಿ ಸೂಚಿಸಿದ "ಸ್ವಾಮೀ, ಮನೆಯೇನೋ

ಇದೆ. ಆದರೆ ವಾರದ ಕೆಳಗೆ ಅಲ್ಲಿದ್ದ ಮತ್ತೊಬ್ಬ ಕಂಟ್ರಾಕ್ಟುದಾರ - ಗುಜರಾತ ದೇಶದವ - ನೇಣು ಹಾಕಿಕೊಂಡು ಸತ್ತಿರುತ್ತಾನೆ. ಈಗ ಸುಣ್ಣ ಹಚ್ಚಿ ಶುದ್ಧಿ ಮಾಡಿದ್ದೇನೆ. ಅದು ಬೇಕೆಂದರೆ ಸಿಗುತ್ತೆ" ಎಂದ. ನಾನು ಬಹಳ ಆಲೋಚಿಸಿ, ಮನೆಯಲ್ಲಿ ದೇವತಾರ್ಚನೆ, ರಾಯರ ಸ್ತೋತ್ರ ಇತ್ಯಾದಿ ಪಾರಾಯಣ ನಡೆಯುತ್ತಿರುವಾಗ ಯಾವ ಭಯ ಬಂದೀತು? ಎಂದು ತರ್ಕಿಸಿ ಆ ಮನೆಯನ್ನೇ ಗೊತ್ತುಮಾಡಿದೆ. ಆದರೆ ಆ ವಿಷಯಗಳನ್ನು ಹೆಂಗಸರಿಗೆ ತಿಳಿಸಕೂಡದೆಂದು ಕಟ್ಟಪ್ಪಣೆ ಮಾಡಿಬಿಟ್ಟೆ. ಸರಿ ಸಾಮಾನು ಇಳಿಸಿದ್ದಾಯಿತು. ಅಲ್ಲಿನ ಜೋಯೀಸರನ್ನು ಕರೆಯಿಸಿ, ಪುಣ್ಯಾಹವಾಚನ ಮಾಡಿಸಿ, ದೇವತಾರ್ಚನೆ ಮಾಡಿ ಸಂಸಾರಕ್ಕೆ ಪ್ರಾರಂಭ. ಹೀಗೆ ಸುಮಾರು ೬ ತಿಂಗಳು ನಡೆಯಿತು.

ಮಕ್ಕಳು ಮರಿಗೆ ಸ್ವಲ್ಪ ದೇಹಾಲಸ್ಯಗಳು ಆಯಿತೇ ಹೊರತು ಬೇರಿನ್ಯಾವ ತೊಂದರೆಯೂ ಆಗಲಿಲ್ಲ – ದೇವರ ದಯವೇ ಸರಿ. ಹವ್ಯ ಕವ್ಯಗಳಿಗೆ ನಂಜನಗೂಡಿನಿಂದ ಆಚಾರ್ಯರನ್ನು ಕರೆಸುತ್ತಿದ್ದೆ. ಕುದುರೆ ಇಟ್ಟಿದ್ದೆ. ಈ ಕಾರಣ ಆಳನ್ನೂ ಕುದುರೆಯನ್ನೂ ಕಳುಹಿಸಿ ಕರೆಸುತ್ತಿದ್ದೆ. ಆ ವೇಳೆಗೆ ನಮ್ಮ ಮಾವನವರು ದೇವಸ್ಥಾನದ ಪೇಷ್ಕಾರರಾಗಿ ಕೆಲಸ ಮಾಡುತ್ತಿದ್ದರು. ಮುಳ್ಳೂರಿಗೆ ೧೦ ಮೈಲಿ ದೂರದಲ್ಲಿ ಸಂತೆಸರಗೂರು ಎಂಬುದೊಂದೂರು. ಅಲ್ಲಿ ಒಬ್ಬ ವೈಷ್ಣವರ ಮನೆ. ಒಂದು ಸಲ ಅವರ ಮನೆಗೆ ಹೋಗಿ ಶ್ರಾದ್ಧಕರ್ಮ ಮಾಡಿದೆ. ಮಂತ್ರ ಮಾಡಿಸುವವರಿಲ್ಲದೆ ಶ್ರಾದ್ಧ ಮಂತ್ರವನ್ನು ಪುಸ್ತಕ ಪಾಠ ಮಾಡಿ - ಊಟಕ್ಕೆ ಲೌಕೀಕರನ್ನ ಹೇಳಿಕೊಂಡು ಕಾರ್ಯ ನಿರ್ವಹಣೆ ಆಗುತ್ತಿತ್ತು.

ಇದೇ ಸಂದರ್ಭ - ಮನೆಯವರೆಲ್ಲರನ್ನೂ ಗಾಡಿಯಲ್ಲಿ ಕೂಡಿಸಿ ಮುಳ್ಳೂರಿಗೆ ಬರುತ್ತಿದ್ದೇವೆ. ಸಂಜೆ ೫ ಘಂಟೆ ಆಯಿತು. ಮಧ್ಯ ಭಾರಿ ಕಾಡು. ಆಗ ಒಂದು ದೊಡ್ಡ ಹುಲಿ (maneater) ಮುಂದೆ ಒಂದು ಫರಲಾಂಗು ದೂರದಲ್ಲಿ ಹೋಗುತ್ತಿದ್ದುದನ್ನು ಕಂಡೆವು. ಅದು ನಿರ್ಭಯವಾಗಿ ಅಲ್ಲಲ್ಲಿ ನಿಂತು ನಮ್ಮ ಕಡೆ ತಿರುಗಿ ನೋಡುತ್ತಾ ದಾರಿ ಸಾಗುತ್ತಿತ್ತು. ಜೊತೆಯಲ್ಲಿದ್ದ ಗಾಡಿಯವನು ನಮಗೆ ಧೈರ್ಯ ಹೇಳಿ, ಎಲ್ಲರೂ ಸೇರಿ ಕೂಗುತ್ತಾ ಮುಂದೆ ಸಾಗಿದೆವು. ಕೊನೆಗೆ ಕಾಡಿನೊಳಕ್ಕೆ ಹೋಗುವ ಒಂದು ದಾರಿಯು ಸಿಕ್ಕಿತು. ಹುಲಿಯು ಆ ಮಾರ್ಗ ಕಾಡನ್ನು ಸೇರಿತು. ನಾವು ಸುರಕ್ಷಿತವಾಗಿ ಊರು ಸೇರಿದೆವು.

ಆ ಊರಿನಲ್ಲಿ 'ಭೃಗುನದಿ' ಅಂತ ಸಣ್ಣ ಹೊಳೆ ಹರಿಯುತ್ತದೆ. ಸಮೀಪದಲ್ಲಿಯೇ ಅದಕ್ಕೆ ಒಂದು ಕಟ್ಟೆ ಕಟ್ಟಿರುತ್ತಾರೆ. ಅಲ್ಲಿಯೇ ಕಾಲುವೆ ತೆಗೆದಿರುತ್ತಾರೆ - ತರೀ ವ್ಯವಸಾಯಕ್ಕೆ. ಅದರಲ್ಲಿ ಇನ್ನೂ ಅನೇಕ

aquaduct, ಸ್ಪೈ      ನ್, ಇತ್ಯಾದಿ ಕಟ್ಟಡಗಳು ಆಗಬೇಕಿತ್ತು. ಅದಕ್ಕಾಗಿ ನನ್ನನ್ನು ಅಲ್ಲಿಗೆ ವರ್ಗ ಮಾಡಿದ್ದು.

ಊರಿನ ಒಂದು ದೃಶ್ಯವೆಂದರೆ - ಎಲ್ಲರ ಮನೆಯವರೂ ಒಂದು ಸಣ್ಣ ಎತ್ತಿಗೆ ತೆಪ್ಪ ಕಟ್ಟಿ, ಎರಡು ಕಡೆಯೂ ಬಿಂದಿಗೆಗಳನ್ನು ಇಟ್ಟು, ನದಿಗೆ ನೀರು ತರುವುದಕ್ಕೆ ಹೋಗುವ ದೃಶ್ಯ. ಅದನ್ನನುಸರಿಸಿ ನಾವೂ ಒಂದು ಬಾಡಿಗೆ ಎತ್ತನ್ನು ಗೊತ್ತು ಮಾಡಿ, ನಾವೇ ಯಾರಾದರೂ ನೀರನ್ನು ತುಂಬಿ ಇಟ್ಟರೆ, ಆಳು ಎತ್ತನ್ನು ಹೊಡೆದುಕೊಂಡು ಬಂದು ಮನೆ ಮುಂದೆ ನಿಲ್ಲಿಸುತ್ತಿದ್ದ. ಆಗ ಕೊಡವನ್ನು ಖಾಲಿ ಮಾಡಿ ಪುನಃ ಕಳಿಸುತ್ತಿದ್ದೆವು.

ಇಲ್ಲಿರುವಾಗ ನಮ್ಮ ಮಾವಂದಿರಿಗೆ ರಿಟೈರು ಆಯಿತು. ಆಗ ಮನೆಯವರೆಲ್ಲ ಇಲ್ಲಿಗೆ ಬಂದು ಕೆಲವು ತಿಂಗಳು ವಾಸ ಮಾಡಿದರು. ಆಗ ದುರದೃಷ್ಟವಶಾತ್ ಭಾವ ಮೈದುನರಲ್ಲಿ ಒಬ್ಬನಾದ ಗೋವಿಂದನೆಂಬ ಚಿಕ್ಕ ಬಾಲಕನಿಗೆ ಸನ್ನಿಪಾತ ಜ್ವರ ಕಾಣಿಸಿತು. ವೈದ್ಯರ ಸಹಾಯ ಸಂತೆಸರಗೂರಿನಿಂದ ಬರಬೇಕು.

**(ಇಲ್ಲಿ ಒಂದು ಪುಟ ಹರಿದು ಹೋಗಿರುವುದರಿಂದ ಮುದ್ರಣ ಮಾಡುವುದಕ್ಕೆ ಆಗಿಲ್ಲ)**

ಅದಕ್ಕಾಗಿ ನಮ್ಮ ಜೊತೆಯಲ್ಲಿ ಉಳಿದ. ಇಷ್ಟು ಮಂದಿಯು ನಡೆದು ಹೋಗಿ ನದಿಯನ್ನು ದಾಟುತ್ತಿದ್ದೆವು. ಕೂಸನ್ನ ಒಬ್ಬ ವಡ್ಡರವರ ಕೈಲಿ ಕೊಟ್ಟೆವು. ನದಿಯ ಪಾತ್ರದಲ್ಲಿ ಹೋಗುತ್ತಿರುವಾಗ ಏಕಾಏಕಿ ಹೊಸ ನೀರು ಬರುತ್ತಿರುವುದು ಕಾಣಿಸಿತು.ಕೆಲವು ನಿಮಿಷಗಳಲ್ಲೇ ಪ್ರವಾಹ ಜಾಸ್ತಿಯಾಗಿ ನಮ್ಮೆದುರಿನಲ್ಲಿ ಒಂದು ಎರಡೆತ್ತಿನ ಗಾಡಿ ಮತ್ತು ಎತ್ತುಗಳು ತೇಲಿಕೊಂಡು ಹೋಗುತ್ತಿತ್ತು. ಸರಿ, ಇನ್ನು ನಮ್ಮಗತಿಯೇನು ಎಂದು ದೇವರಿಗೆ ಮೊರೆ ಇಟ್ಟೆ. ಆಚೆ ದಡ ಸೇರುವಷ್ಟರಲ್ಲಿ ಎದೆ ಮಟ್ಟಕ್ಕೆ ನೀರು ಬಂದಿತು. ದಡದ ಮೇಲೆ ದೋಣಿ ನಡೆಸುವವರಿದ್ದರು. ಅವರು ನದಿಗೆ ಧುಮ್ಮಿಕ್ಕಿ ನಮ್ಮನ್ನು ಸೆಳೆದು ಅಪಾಯದಿಂದ ಪಾರು ಮಾಡಿದರು. ಆಗ ಮಗಳ ಲಗ್ನಕ್ಕಾಗಿ ಸಾಮಾನುಗಳೊಡನೆ ಹೋಗುತ್ತಿದ್ದೆವು. ದೇವರ ದಯದಿಂದ ಪಾರಾದೆವು. ಅಲ್ಲಿ ಮನೆ ಖಾಲಿ ಇದ್ದಿಲ್ಲ. ಅಲ್ಲಿ ಛತ್ರದಲ್ಲೇ ವಾಸ. ಅದೇ ಛತ್ರದಲ್ಲೇ ಮಗಳ ಲಗ್ನವೂ ಆಯಿತು. ಇದೊಂದೇ ಲಗ್ನ ಸಾಲ ಮಾಡದೆ ಮಾಡಿದ್ದು. ಬಂದ ಬೀಗರೆಲ್ಲ ಸಂಬಂಧಿಕರೇ ಆದ್ದರಿಂದ ಒಂದು ತಿಂಗಳು ಅಲ್ಲೇ ಇದ್ದರು. ಅನಂತರ ಮೈಸೂರಿಗೆ ಹೋದರು.

ಹೊಸದುರ್ಗದಲ್ಲಿರಬೇಕಾದರೆ ೪ನೇ ಪುತ್ರರತ್ನನ ಜನನವಾಯಿತು. ತಾ ೭-೧೨-೩೪. ಒಂದು ಹೊಸ ರಸ್ತೆ ಹಾಕುವ ಕೆಲಸ. ಒಂದು ವರ್ಷ ಮಾತ್ರ. ಇದೆ ಕಾಲದಲ್ಲಿ ೧೦ ಮೈಲಿ ದೂರದಲ್ಲಿದ್ದ ಗವಿರಂಗಾಪುರ ಎಂಬ ಸ್ಥಳಕ್ಕೆ ಹೋಗಿ, ಕೂರ್ಮಾವತಾರದ ದೇವಸ್ಥಾನಕ್ಕೆ ಹೋಗಿ ನೋಡಿ ಬಂದೆವು. ಕೂರ್ಮದಂತೆಯೇ ಪ್ರತಿಮೆ ಇರುತ್ತೆ. ನಿತ್ಯ ಪೂಜಾದಿಗಳು ನಡೆಯುತ್ತಿತ್ತು.

ಇಲ್ಲಿಂದ ಚಿತ್ರದುರ್ಗಕ್ಕೆ ವರ್ಗವಾಯಿತು. ಮುನಿಸಿಪಾಲಿಟಿಗೆ. ಅಲ್ಲಿ ಉತ್ತರಾದಿಮಠದ ಬಳಿಯೇ ಬಾಡಿಗೆಗೆ ಇದ್ದೆವು. ಅಲ್ಲಿ ಕೆಲವು ತಿಂಗಳು ಕೆಲಸದ ನಂತರ ಅದೇ ಊರಲ್ಲಿಯೇ P.W. Department ಗೆ ವರ್ಗವಾಗಿ ಅಸಿಸ್ಟೆಂಟ್ ಇಂಜಿನಿಯರ್ no. 1 ಸಬ್ ಡಿವಿಜನ್ ಗೆ ಹಾಕಿದರು. ಆಗ ಎರಡನೇ ಮಗಳು ಲಗ್ನಕ್ಕೆ ಇದ್ದಳು. ಅವಳು ಮೂಲಾ ನಕ್ಷತ್ರ ಅಂದರೆ ಮಾವನಿಲ್ಲದ ಮನೆ ಅಂತ ತಾತ್ಪರ್ಯ. ಇಂಥ ಮನೆತನದ ಗಂಡಾಗಬೇಕು. ಬಹುವಾಗಿ ದ್ರವ್ಯ ವ್ಯಯ ಮಾಡಿ ವರಾನ್ವೇಷಣೆಯಾಯಿತು. ಸಫಲವಾಗಲಿಲ್ಲ. ಆ ಹುಡುಗಿಯ ಲಗ್ನಕ್ಕಾಗಿ ಒಂದು ಸಾವಿರ ರೂಪಾಯಿಗೆ ಇನ್ಶೂರೆನ್ಸ್ ಕಂಪನಿಯಲ್ಲಿ ಹಾಕಿದ್ದು ಬಂದಿತು. ಆಗ ಮೈಸೂರಿಗೆ ಬಂದಿದ್ದೆ. 1935ರಲ್ಲಿ ಉಡುಪಿ ಪರ್ಯಾಯ ಸಮಯ. ಸರಿ, ಎಲ್ಲರೂ ಉಡುಪಿಗೆ ಹೋಗಿ. ಮಧ್ವ ಸರೋವರ ಸ್ನಾನ. ಶ್ರೀ ಕೃಷ್ಣನ ದರ್ಶನ ಚೆನ್ನಾಗಿ ಮಾಡಿದೆವು. ಅಲ್ಲಿ ಪ್ರೇಕ್ಷಣೀಯ ಸ್ಥಳಗಳಾದ ಪಾಜಕ ಕ್ಷೇತ್ರ ಇತ್ಯಾದಿ ನೋಡಿದೆವು. ಮೈಸೂರಿಗೆ ಬಂದೆವು. ಬರುವ ವೇಳೆಗೆ ಮುನಿಸಿಪಾಲಿಟಿಯಿಂದ ನೋಟೀಸು ಬಂದಿತ್ತು. ಖಾಲಿ ನಿವೇಶನಗಳಲ್ಲಿ ಮನೆ ಕಟ್ಟದಿದ್ದರೆ ಜಾಗವನ್ನು ಮುನಿಸಿಪಾಲಿಟಿಯವರು ವಾಪಸು ತೆಗೆದುಕೊಳ್ಳುತ್ತಾರಂತೆ. ಹಿಂದೆ ೩-೪ ವರ್ಷದ ಕೆಳಗೆ ವೀವರ್ಸ್ ಲೈನು ಅಥವಾ ಈಗ ಕೃಷ್ಣಮೂರ್ತಿಪುರಂ ಎಂಬಲ್ಲಿಎರಡು ಸೈಟುಗಳನ್ನು ಕೊಂಡಿದ್ದೆ. ಅಲ್ಲಿ ಸಣ್ಣದಾಗಿ ಒಂದು ಮನೆ ಕಟ್ಟಲು ನಿರ್ಧರಿಸಿದೆ. ಕೈಲಿ 1000 ರೂಗಳಿತ್ತು. ಉಡುಪಿ ಯಾತ್ರೆಗೆ ೬೦ ರೂ. ಯಾತ್ರೆ ಖರ್ಚಾಗಿತ್ತು. ಮನೆ ನಕಾಸೆ ತಯಾರು ಮಾಡಿ ಮುನಿಸಿಪಾಲಿಟಿಗೆ ಅರ್ಜಿ ಹಾಕಿಕೊಂಡೆ. ಮಂಜೂರಾಯಿತು. ರಜೆ ಜಾಸ್ತಿ ಮಾಡಿ ಮನೆ ಕಟ್ಟಿಸಲು ಸ್ವಂತವಾಗಿ ನಿಂತೆ.

ಆಗ ಇಲ್ಲಿಯೇ ನಮ್ಮ ಮಾವಂದಿರ ಮನೆ. ಒಂದು ಔಟ್ ಹೌಸ್ ಖಾಲಿ ಇತ್ತು. ಅದೂ ಕೂಡ ಕೃಷ್ಣಮೂರ್ತಿಪುರಂನಲ್ಲಿಯೇ ಸಮೀಪ. ಅಲ್ಲಿ ವಾಸ. ಜೊತೆಗೆ ನನ್ನ ಪತ್ನಿ ಮತ್ತು ಕೈ ಕೂಸು. ಒಂದು

ದೊಡ್ಡ ಹುಡುಗಿ. ಲಗ್ನವಾಗತಕ್ಕದ್ದು. ಆಗ ಗಂಡಾಳಿಗೆ  ಕೂಲಿ ೪ ಆಣೆಯಿಂದ ೮ ಆಣೆವರೆಗೆ. ಹೆಣ್ಣಾಳಿಗೆ ೨ ಆಣೆಯಿಂದ ೪ ಆಣೆ. ಗಾರೆಯವನಿಗೆ ೧೨ ಆಣೆಯಿಂದ ೧-೪-೦. ಅಮಾನಿಯಲ್ಲಿ ಕೆಲಸ. ಬೆಳಿಗ್ಗೆ ಸ್ನಾನ, ಸೂಕ್ಷ್ಮವಾಗಿ ಆಹಾರ ಸೇವಿಸಿ ೭ ಘಂಟೆಗೆ ಕೆಲಸದ ಹತ್ತಿರ ಹೋಗಿ ಕೂಲಿಗಳ ಹಾಜರಿ ಪಟ್ಟಿ ತೆಗೆದು ಕೆಲಸಕ್ಕೆ ಪ್ರಾರಂಭ. ಸುಮಾರು ೯ ಘಂಟೆ ಹೊತ್ತಿಗೆ ನನ್ನ ಪತ್ನಿ ತಿಂಡಿ ಕಾಫಿ ಅಲ್ಲಿಗೇನೆ ತಂದು ಕೊಡುತ್ತಿದ್ದಳು. ಈ ರೀತಿ ಎರಡು ತಿಂಗಳು ನಡೆಯಿತು. ಆಗಿನ ಕಾಲದಲ್ಲಿ R.C.C ತಾರಸಿ ಬಂದಿತ್ತು. ಆದರೆ ಕೆಲವು ಕಡೆ ಕೆಡುತ್ತಿತ್ತು.ಇನ್ನೂ ಸರಿಯಾದ ವ್ಯವಸ್ಥೆ ಇರಲಿಲ್ಲ. ಈ ಕಾರಣ ಮದರಾಸ ತಾರಸಿಯನ್ನೇ ಹಾಕಬೇಕಾಯಿತು. ಮನೆ ಕಟ್ಟಿದ್ದಾಯಿತು. ಗೃಹಪ್ರವೇಶದ ಶಾಸ್ತ್ರ ಮಾಡಿ ಮನೆಯನ್ನು ೧೨ ರೂಪಾಯಿಗೆ ಬಾಡಿಗೆಗೆ ಕೊಟ್ಟು ಚಿತ್ರದುರ್ಗಕ್ಕೆ  ಹೊರಟೆವು. ರಜೆ ತೀರಿತ್ತು. ಇಷ್ಟರಲ್ಲಿ ಹುಡುಗಿ ಲಗ್ನಕ್ಕೆ ಅನುಕೂಲವಾಗಲೆಂದು ಸೊಸೈಟಿಯಲ್ಲಿ ಮನೆ ಮೇಲೆ ಸಾಲಕ್ಕೆ ಅರ್ಜಿ ಹಾಕಿದ್ದೆ.

ಚಿತ್ರದುರ್ಗಕ್ಕೆ ಹೋಗಬೇಕಾದರೆ ಹೊಳಲುಕೆರೆ ಮಾರ್ಗ. ಅಷ್ಟು ಹೊತ್ತಿಗೆ ಹೊಳಲುಕೆರೆ ಫಾರೆಸ್ಟ್ ರೇಂಜರ್ ಶ್ರೀ. ನಂಜುಂಡರಾಯರ ತಮ್ಮ ಒಂದು ವರವೆಂದು ಗೊತ್ತಾಗಿ ಕಾಗದ ಪತ್ರ ನಡೆಸುತ್ತಿದ್ದೆ. ಹುಡುಗ ಕಲ್ಕತ್ತೆಯಲ್ಲಿ ಪಶುವೈದ್ಯದ ಪರೀಕ್ಷೆಗೆ ಓದುತ್ತಿದ್ದ. ಬೇಸಿಗೆ ರಜವಾದ್ದರಿಂದ ಹುಡುಗ ಬಂದಿದ್ದ. ಸರಿ, ಹೊಳಲುಕೆರೆಗೆ ಬಂದು, ವರನನ್ನ ನೋಡಿ ನಿಶ್ಚಯವಾಯಿತು. ಸಮೀಪದಲ್ಲಿಯೇ ಲಗ್ನಮುಹೂರ್ತವೂ ಇಡಲ್ಪಟ್ಟಿತು. ಚಿತ್ರದುರ್ಗಕ್ಕೆ ಸೇರಿ ಸ್ವಲ್ಪ ದಿನಗಳಲ್ಲಿಯೇ ಮೈಸೂರಿಗೆ ಹೋಗಿ ಸೊಸೈಟಿ ಸಾಲ ಮಂಜೂರು ಮಾಡಿಸಿಕೊಂಡು ಹಣ ತಂದೆ.

ಎರಡನೇ ಮಗಳು ಚಿ. ಕಮಲು ಎಂಬುವಳ ಲಗ್ನ ಚಿತ್ರದುರ್ಗದಲ್ಲಿ ಆಯಿತು. ಉತ್ತರಾದಿಮಠದಲ್ಲಿ. ಮಠಾಧಿಕಾರಿಗಳಾದ ಶ್ರೀಯುತ ಸುಬ್ಬಣ್ಣಾಚಾರ್ಯರೇ ಪುರೋಹಿತರು. ಲಗ್ನದ ದಿನ ಅಲ್ಲಿನ ಸರ್ಕಾರಿ ನೌಕರರುಗಳಿಗೆ ಊಟಕ್ಕೆ ಹೇಳಿದ್ದೆ. ಆಫೀಸಿಗೆ ೧೦ ಘಂಟೆಗೆ ಹೋಗಬೇಕಿತ್ತು. ಎಲ್ಲರಿಗೂ ಕಡ್ಡಾಯವಾಗಿ ೯-೩೦ ಘಂಟೆಗೆ ಊಟಕ್ಕೆ ಹಾಕುತ್ತೇನೆಂಬುದಾಗಿ ಹೇಳಿದ್ದೆ. ಅದು ಸಿದ್ಧಿಸಬೇಕಾದರೆ ಮುಸುರೆ ತೊಳೆಸುವದರಿಂದ ಅಡಿಗೆ ಆಗುವವರೆಗೂ ಉಸ್ತುವಾರಿ ಬೇಕಾಗಿತ್ತು. ನಾನು ಮತ್ತು ನನ್ನ ಪತ್ನಿ ರಾತ್ರಿ ಮಲಗಲೇ ಇಲ್ಲ. ಎಲ್ಲವೂ ಸಿದ್ಧವಾಯಿತು. ದೇವರ ಪೂಜೆ ನೈವೇದ್ಯವಾಯಿತು. ಎಲೆ ಹಾಕಿ ಬಡಿಸಿತು.

ಆದರೆ ಪುರೋಹಿತರು ಬಂದಿರಲಿಲ್ಲ. ನೌಕರರನ್ನು ಕಾಯಿಸುವಂತಿದ್ದಿಲ್ಲ. ಸರಿ, ಎಲ್ಲರಿಗೂ ತೀರ್ಥ ಹಾಕಿ ಕೂಡಿಸಿದೆ. ಪುರೋಹಿತರು ಆಮೇಲೆ ಬಂದರು. ಅವರಿಗೆ ಅಡಿಗೆ ಮನೆಯಲ್ಲೇ ಎಲೆ ಹಾಕಿ ಬಡಿಸಿದೆವು. ಎಲ್ಲವೂ ಸಾಂಗವಾಗಿ ನೆರವೇರಿತು.

October 30, 1937 - ಕಾರ್ತೀಕ ಶುದ್ಧ ಸಪ್ತಮಿ, ಶಾಂತಿ ಪಾಠದ ಮಂಗಳ. ಅನಂತರ ದುರ್ಗದಿಂದ ಮೊಳಕಾಲ್ಮೂರಿಗೆ ವರ್ಗವಾಯಿತು.

April 4, 1938 - ಇಲ್ಲಿಯೇ ನನ್ನ ಮೊದಲ ಮಗಳ ನಿಶ್ಚಯ ವಾಯಿತು

August 31, 1937 - ಬೊಮ್ಮಗಟ್ಟಿಯಲ್ಲಿ ಮೊಕ್ಕಾಂ, ಸಂಸಾರ ಸಮೇತ. ಸೆಪ್ಟೆಂಬರ್ 1 - C.L. ಹೊಸಪೇಟೆಗೆ ಹೋಗಿ, ಹಂಪಿಗೆ ಹೋಗಿ ಮೊಕ್ಕಾಂ.

September 2, 1937 ಶ್ರಾವಣ ಬಹುಳ ದ್ವಾದಶಿ - ಜನ್ಮದಿನ - ಚಕ್ರತೀರ್ಥದಲ್ಲಿ ಸ್ನಾನ. ದೇವರ ದರ್ಶನ. 3rd ಆನೆಗೊಂದಿ. ಅಲ್ಲಿಂದ ಬಳ್ಳಾರಿಗೆ - ಅಲ್ಲಿಂದ ನನ್ನ ಕೆಲಸದ ಗಡಿ ಆದ ರಾಂಪುರಕ್ಕೆ.

February 11,1938 ಮೊಳಕಾಲ್ಮೂರುವಿನ ಕೆಲಸ - ಚಾರ್ಜು ಕೊಟ್ಟು ರಜದ ಮೇಲೆ ಹೊರಟೆ. ಮೈಸೂರಿಗೆ. 12 - 17 ಜಮೀನಿನ ಮೇಲೆ ಸಾಲಕ್ಕೆ ಏರ್ಪಾಟು. 18th - ಕಾಂಪೌಂಡು ಗೋಡೆ ಹಾಕಲು ಪ್ರಾರಂಭ. (ಸಾಲ 800 /- ಸಿಕ್ಕಿತು ). 20 ನೇ ಮಾರ್ಚಿವರೆಗೆ ಮೈಸೂರು.

March 21, 1938 - ಚಳ್ಳಕೆರೆಯಲ್ಲಿ ಕೆಲಸಕ್ಕೆ ರಿಪೋರ್ಟ್.

December 29, 1938 ಭಾಗವತ ಸಾರೋದ್ಧಾರ ಮಂಗಳ. 6 ನೇ ತಾರೀಖಿನಿಂದ 15 ರವರೆಗೆ ರಜ. ನನ್ನ ನಾದಿನಿ ಸೌ. ಅಹಲ್ಯಾಬಾಯಿಯ ಲಗ್ನ. ಮೈಸೂರಿನಲ್ಲಿ. 16 , 17 - ಬೆಂಗಳೂರಿಗೆ ಹೋಗಿ ಕಣ್ಣು ಪರೀಕ್ಷೆ ಮಾಡಿಸಿದೆ. ಕನ್ನಡಕಕ್ಕೆ ಆರ್ಡರು ಕೊಟ್ಟೆ. –

March 20, 1938 - ಚಳ್ಳಕೆರೆಗೆ.

April 3,1938 - P . leave ಮಂಜೂರು - for 25 days - ತಾತ್ಪರ್ಯ ನಿರ್ಣಯದ ಸುಂದರ ಕಾಂಡ ಪಾರಾಯಣ. ಹಾಸನಕ್ಕೆ ವರ್ಗದ ಆರ್ಡರು ಬಂತು.

May 5, 1939 - ಹಾಸನದಲ್ಲಿ ಡ್ಯೂಟಿಗೆ ಹಾಜರಾದೆ –

September 9, 1939 , 27 th ಮೈಸೂರಿಗೆ ಹೋಗಿ ಬರಬೇಕಾದರೆ ಚಿ. ಪದ್ಮಾನ್ನ ಕರೆದುಕೊಂಡು ಬಂದೆ.

November 12, 1939 - ಎರಡನೇ ಮಗಳ ನಿಷೇಕ. 19 th - ಸೌ. ಕಮಲು ಮತ್ತು ಅವಳ ಯಜಮಾನರು ಬೆಂಗಳೂರಿಗೆ ಹೊರಟರು.

January 11, 1940 to January 15, 1940 . ಮೈಸೂರು - ಜಮೀನು. ಪುನ: ಹಾಸನಕ್ಕೆ.

March 22, 1940 ಫಾ - ಶು - ಚತುರ್ದಶಿ ಶುಕ್ರವಾರ. 12 P . M ರೈಲಿಗೆ ತುಮಕೂರಿಗೆ ಹೊರಟೆ. R . R ರವರನ್ನು ದಾರಿಯಲ್ಲಿ ಅರಸೀಕೆರೆಯಲ್ಲಿ ನೋಡಿದೆ.

March 23, 1940 . ದೇವರಾಯನದುರ್ಗ ಸೇರಿದೆ. 9 ಮೈಲಿ ನಡೆದೇ ಹೋದೆ. 9 . 30 ಕ್ಕೆ ಬೆಳಗ್ಗೆ ಬೆಟ್ಟ ಹತ್ತಿದೆ. ಕ್ಷೇತ್ರ ದರ್ಶನ.

March 24, 1940 - ಅಂಕೀತೋಪದೇಶ ಭಾನುವಾರ. 25th ಬೆಟ್ಟ ಇಳಿದಿದ್ದು 5 p . m . ರಾತ್ರಿ ರೈಲಿಗೆ ಹಾಸನಕ್ಕೆ -

April 16 1940 - learnt Guruji cast off his earthly body on the 16th at 1 p.m.

January 4, 1941 . ಶನಿವಾರ - ಮೈಸೂರು.

January 5, 1941- ಚೆನ್ನಪಟ್ಣ . ಅಲ್ಲಿಂದ ಅಬ್ಬೂರು. ಅಲ್ಲಿಂದ ಕೊಲ್ಲೇಸ್ವೇಟೆಗೆ. ಅಲ್ಲಿ ಶ್ರೀ. ಅನಂತ ಕೃಷ್ಣಮೂರ್ತಿಯನ್ನು ನೋಡಿದೆ. ಅವನಿಗೂ ಅಂಕಿತವಾಗಿತ್ತು ಮತ್ತು ಮಾಗಡಿ ರಂಗಪ್ಪನಿಂದ ತಂಬೂರಿ ತರಿಸಿದ್ದರು (ರಂಗಪ್ಪ ಮಾಧ್ವ. ಗುರುಗಳ ಶಿಷ್ಯ). ನನಗೂ ಗುರುಗಳು ತಂಬೂರಿಗೆ ( 14 - 8 -

0 ) ಗೆ ಆರ್ಡರು ಕೊಟ್ಟಿದ್ದರು. ಅದನ್ನು ಅನಂತ ಕೃಷ್ಣಮೂರ್ತಿ ತಂದು ಇಟ್ಟರು. ಅವನಿಂದ ತೆಗೆದುಕೊಂಡು ಮೈಸೂರಿಗೆ ಬಂದೆ 6th .

January 26, 1941- ಬೆಂಗಳೂರಿಗೆ . R . R ಜೊತೆ. 27 ಪು. ಬ . ಅಮಾವಾಸ್ಯೆ. ಪು. ದಾ. ಪುಣ್ಯ ದಿನ. ವಸಂತಪುರದಲ್ಲಿ ಶ್ರೀ ಉರುಗಾದ್ರಿವಾಸ ದಾಸರು ಜರುಗಿಸುತ್ತಿದ್ದರು.

**Need to do the following 1. Get consistency across date formats, decide whether kannada or english numerals. 2. Check continuity of dates. In some places, later story actually comes earlier - especially Kammu's marriage episode. 3. Decide which terms or phrases need notes. 4. Check with Madhukaka whether he wants to give any notes. 4. Around page 21/22 the page order seems to have got reversed in the original set. 5. What do we do about grammatical errors - in many places the language is one of conversation and not appropriate for written kannada. Check with kaka(s) what to do. 6. Decide on formatting - page and section breaks, page numbers, header, footer, font size, type, bold, underline, italics etc. 7. Decide how we will give foot notes, explanations and editor's notes.**

22nd - 30th September - ಆಶ್ವೀಜ - ನವರಾತ್ರಿಗೆ ಮೈಸೂರಿನಲ್ಲಿ ಮೊಕ್ಕಾಂ.

19th October 1941 - 18 ದಿನ earned leave ತೆಗೆದುಕೊಂಡೆ. ನಮ್ಮ ಬೆಂಗಳೂರು ದೊಡ್ಡಪ್ಪ ತೀರಿಕೊಂಡಿದ್ದರು –

12th October . ಆಗ ಬೆಂಗಳೂರು ರೈಲ್ವೇ ಕ್ವಾರ್ಟರ್ಸಿನಲ್ಲಿ ನನ್ನ ಷಡ್ಡಕ ಶ್ರೀನಿವಾಸರಾಯರು ಇದ್ದರು. ಅಲ್ಲಿ ಮೊಕ್ಕಾಂ. ಪತ್ನೀ ಸಮೇತ. ಯಾಕೆಂದರೆ ನಮ್ಮ ತಾಯಿಯವರ ಕಣ್ಣಿನ operation ಆಗಬೇಕಿತ್ತು. (ಪರೆ ತೆಗೆಯೋದು) Dr . B . K . ನಾರಾಯಣರಾಯರ ಆಸ್ಪತ್ರೆಯಲ್ಲಿ ನವೆಂಬರ್ 1 ಕ್ಕೆ operation ಗೊತ್ತಾಯಿತು. ಆಗ ಚಿಪ್ಪಗಿರಿಯಲ್ಲಿ ಆರಾಧನಾ ಸನ್ನಿವೇಶ.

26 - 10 - 41 ಬೆಂಗಳೂರಿಂದ ರಾತ್ರಿ ರೈಲಿಗೆ ಗುಂತಕಲ್ಲಿಗೆ ಪ್ರಯಾಣ.

27th ಕಾರ್ತೀಕ - ಶು - ಅಷ್ಟಮಿ. ರಾಯಚೂರಿಗೆ ಹೋಗಿ (11 - 30 a . m ) ಅಲ್ಲಿ ಫಕೀರಪ್ಪನ ಛತ್ರದಲ್ಲಿ ಬಿಡಾರ. ಅಡಿಗೆ ಮಾಡಿ ಊಟ ಮಾಡಲು ವೇಳೆ 3 p . m ಆಯಿತು. ಮಾನ್ವಿಗೆ ಹೋಗುವ ಉತ್ಸಾಹ. ವಿಚಾರಿಸಿ ರಾತ್ರಿ ಯಾವುದೋ ಲಾರಿಯಲ್ಲಿ ಕುಳಿತು 11 p . m ಮಾನ್ವಿಗೆ - 11 p . m ಗೆ ಸೇರಿದೆ. 28th ಅಲ್ಲಿ ಹೊಂಡದಲ್ಲಿ ಸ್ನಾನ - ದೇವರ ಪೂಜಾ. ಶ್ರೀ ಜಗನ್ನಾಥ ದಾಸರ ಸ್ಮಾರಕ ದರ್ಶನ - ಪೂಜಾರರ ಮನೆಯಲ್ಲಿ ಪ್ರಸಾದ. ತಾಯಿಯವರಿಗೆ operation ಅನುಕೂಲವಾಗಲಿ ಅಂಬೋ ದೃಷ್ಟಿಯಿಂದ - ಹರಿಕಥಾಮೃತ ಸಾರದ ಆದ್ಯಂತ ಶ್ಲೋಕಗಳ ಪಾರಾಯಣ - ಸಾಯಂಕಾಲ ಚೀಕಲಪರವಿಗೆ ಪ್ರಯಾಣ - ಜೊತೆಯಿತ್ತು. ನಡೆದೇ ಹೊರಟೆ. ದಾರಿಯಲ್ಲಿ ಸಂಜೀವರಾಯರ ಗುಡಿ. ( ಐತಿಹ್ಯ - ಅಲ್ಲಿ ರಾಘವೇಂದ್ರ ಸ್ವಾಮಿಗಳು ಬಿಡಾರ ಮಾಡಿದ್ದಾಗ ಹೊಲೆಯ ಜನ್ಮದಲ್ಲಿದ್ದ ಕನಕನು ಸಾಸುವೆ ಅರ್ಪಿಸಿದ - ಒಂದು ಸಣ್ಣ ಕಲ್ಲನ್ನು ತೋರಿಸು _______ .

___________ 29th ಚೀಕನಪರಿವಿ - ಶ್ರೀ ವಿಜಯರಾಯರ ಆರಾಧನೆ. ____________
ಶ್ರೀಪಾದರಾಜರಿಂದ ಸ್ಥಾಪಿತ - ಅಶ್ವತ್ಥ ನರಸಿಂಹನ ದರ್ಶನ. ಭೋಜನ . 5 ಘಂಟೆ ಸಾಯಂಕಾಲ ಪಲ್ಲಕ್ಕಿ ಸೇವಾ - ನರ್ತನ ಸೇವಾ ಸಲ್ಲಿಸಿದೆ - ಯಥಾಶಕ್ತಿ ದೇವರನಾಮ ಹೇಳಿಕೊಂಡೆ "ವೆಂಕಟೇಶ ಭವ ಸಂಕಟ "

30th - ಗುರುವಾರ . ಏಕಾದಶಿ . ತುಂಗಾ ಸ್ನಾನ. ಹುಲ್ವಿಗೆ ನಾಲ್ಕು ಮೈಲು ಪ್ರಯಾಣ. ವಾಸುದೇವರಾವ್ ಮಗ ರಾಘವೇಂದ್ರ ರಾಯರ ಮನೆಯಲ್ಲಿ ವಿಶ್ರಾಂತಿ.

ಸಮೀಪದಲ್ಲಿ ವ್ಯಾಸಣ್ಣನಿಂದ ಕಟ್ಟಿಸಲ್ಪಟ್ಟ ಹೊಂಡ - ಚತ್ರ ಕೆಲಸ ಬಹಳ ವಿಚಾರಿಸಿದ್ದಾರಲ್ಲಿ - ಆಗಿನ ಕಾಲಕ್ಕೇನೇ. 5 ಲಕ್ಷ ದ್ರವ್ಯ ಖರ್ಚಾಯಿತಂತೆ. ಈ ಊರಿನ ಹತ್ತಿರ ವಿಜಯರಾಯರು ತಪಸ್ಸು ಮಾಡಿದ ಗುಹೆ ಇದೆ. ಬಸ್ಸಿನಲ್ಲಿ ಕೋಶಿಗಿಗೆ ಪ್ರಯಾಣ. ರೈಲಿನಲ್ಲಿ ಗುಂತಕಲ್ಲಿಗೆ. ಅಲ್ಲಿಂದ ವಿಜಯರಾಯರ

ಕಟ್ಟೆಗೆ. ರಾತ್ರಿ 7 ಘಂಟೆ ಆಯಿತು. ಕೂಡಲೇ ಪುಷ್ಕರಿಣಿಯಲ್ಲಿ ಸೂಕ್ಷ್ಮ ಆಹ್ನಿಕ - ಜಾಗರಕ್ಕೆ ಹೋದೆ. 31st October . ಶುಕ್ರವಾರ. ದ್ವಾದಶಿ ಪಾರಣೆ 9 ಗಂಟೆ. 3 ಗಂಟೆಗೆ ಗುಂತಕಲ್ಲಿಗೆ ವಾಪಸ್ಸು. ರಾತ್ರಿ ರೈಲಿನಲ್ಲಿ ಬೆಂಗಳೂರಿಗೆ.

1 - 11 - 41 . ತಾಯಿಯವರ ಕಣ್ಣಿನ operation ಆಗುವ ವೇಳೆಗೆ ಸರಿಯಾಗಿ ಅಲ್ಲಿದ್ದೆ. ಹಾಗೆಯೇ ತಾಯಿಗೆ ಮಾತು ಕೊಟ್ಟು ಯಾತ್ರೆಗೆ ಹೋಗಿದ್ದೆ - ಶ್ರೀ ಹರಿ ನಡೆಸಿಕೊಟ್ಟ. ಆಪರೇಷನ್ನೂ ಸಹ ದೈವಿಕವಾಗಿ ಚೆನ್ನಾಗಿ ಆಯಿತು ಅಂತ ಡಾಕ್ಟರು ಹೇಳಿದರು ಮತ್ತು ತೆಗೆದ ______ ತೋರಿಸಿದರು. 2 - 11 - 41 ರಾತ್ರಿ ಹಾಸನಕ್ಕೆ ಪ್ರಯಾಣ. 3 - 11 - 41 Report ________ . 7 - 12 - 41 - ತಾಂಡವ ಕೃಷ್ಣ ವಿಠಲ ದಾಸರನ್ನ ( H . Bhima Rao ) ಮನೆಗೆ ಪೂಜೆಗೆ ಕರೆದೆ.

…..

(about eight to nine lines of writing are partially torn and indecipherable)
ಶ್ರಾವಣ ಅಷ್ಟಮಿ. ಬೆಳಗಿನ ಝಾವ ಸ್ವಪ್ನ. ….ರಾಮಚಂದ್ರರಾಯರ ಜೊತೆ ಹೋದ ಹಾಗೆ…. ಆಗ ಗುರುಗಳು ತಾವೇ ಬಂದು ಕ್ಷೇಮ ಸಮಾಚಾರ….. "ನೀನು ಘಟ್ಟಿಗ ಕಾಣೋ" ಅಂತ ಹೇಳಿದರು. ನಂತರ ಹತ್ತಿರ ಇದ್ದ ಕಿತ್ತಲೆ ಗಿಡದಲ್ಲಿ ಕಾಯಿ ತೋರಿಸಿ ಇವುಗಳಿಗೆ ದೇವರು ಶಕ್ತಿ ಕೊಟ್ಟರೆ ಅವುಗಳೂ ಸಹ ನಮ್ಮಲ್ಲಿ ಬರುವವು ಎಂದು ಹೇಳಿದರು.
ಡಿಸೆಂಬರ್ 12th executive engineer ಜೊತೆಯಲ್ಲಿ ಬಿಸಲೆ ಘಾಟಿನಲ್ಲಿ ತಂಗಿದ್ದು, 13th ಸುಬ್ರಮಣ್ಯಕ್ಕೆ ಹೋಗಿ ದೇವರ ದರ್ಶನ ಇತ್ಯಾದಿ. ವ್ಯಾಸ ಸಂಪುಟ - 14th, 15th. ಬಿಸಲೆಗೆ ವಾಪಸ್. 16th ಹಾಸನ.

2-2-1943 ಮಂಗಳವಾರ ರೈಲಿನಲ್ಲಿ RR (Editor's note: RR refers to Sri. R. Ramachandra Rao of Chitradurga - ತಂದೆ ವೆಂಕಟೇಶವಿಠ್ಠಲದಾಸರು) ಜೊತೆಯಲ್ಲಿ ಕರಿಗಿರಿ ಕ್ಷೇತ್ರಕ್ಕೆ ಪ್ರಯಾಣ. 3rd ಬೆಟ್ಟಕ್ಕೆ 8 ಘಂಟೆಗೆ ತಲುಪಿದೆವು

4-2-43. ಶ್ರೀ ದಾಸರ ಆರಾಧನಾ ಮಹೋತ್ಸವ

5-2-43 ತುಮಕೂರಿನಲ್ಲಿ ಮೊಕ್ಕಾಮ್. 6th - ಹಾಸನಕ್ಕೆ

8-2-43 ಶ್ರೀ ಉರಗಾದ್ರಿ ವಾಸರು ಮತ್ತು ಇತರರು ದೇವರಾಯನದುರ್ಗದಿಂದ ಬೆಳಿಗ್ಗೆ ಬಂದರು. ಶ್ರೀ ತಂದೆ ವೆಂಕಟೇಶ ವಿಠ್ಠಲ ದಾಸರ ಮನೆಯಲ್ಲಿ ಪೂಜಾ ಮತ್ತು ಪ್ರಸಾದ. 9th - ಮಂಗಳವಾರ ಶ್ರೀ ಉರುಗಾದ್ರಿವಾಸವಿಠ್ಠಲದಾಸರು ನಮ್ಮ ಮನೆಗೆ ಬಂದು ಅನುಗ್ರಹಿಸಿದರು. ಮಾತೋಶ್ರಿಯವರಿಗೆ ಅಂಕೀತೋಪದೇಶವಾಯಿತು. 'ಭಾರತೀಶಪ್ರಿಯ ವಿಠ್ಠಲ' ಅಂತ.

11-2-43 ಶ್ರೀ ಉರುಗಾದ್ರಿವಾಸರು ಮತ್ತು ಜೊತೆ ಬಂದಿದ್ದವರು ಚಿತ್ರದುರ್ಗಕ್ಕೆ ಹೊರಟರು

30-5-43 Bangalore H. ಭೀಮರಾಯರ ಮನೆಯಲ್ಲಿ ಜಾಗರಕ್ಕೆ ಹೋಗಿದ್ದೆ

31-5-43 ಸೋಮವಾರ. ಪೂಜ್ಯ ವೆಂಕಟರಾಯದಾಸರನ್ನ ಕಂಡೆ ಶಂಕರಪುರದಲ್ಲಿ. ಹಾಗು ಶ್ರೀ ಹಯವದನರಾಯರ ಭೇಟಿ ಆಯಿತು.